"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

19ನೇ ಮಾರ್ಚ್ 2021
ಶುಕ್ರವಾರ

## ವಿಷಯಾನುಕ್ರಮಣಿಕೆ

**2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯ ಹಾಗೂ ಬೋಧಕ ಸಿಬ್ಬಂದಿಗಳ ಕೊರತೆ ಇದ್ದರೂ ಕೂಡ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವ ಕುರಿತು ಸದನ ಸಮಿತಿಯನ್ನು ರಚಿಸಲು ಒತ್ತಾಯ**

- ಶ್ರೀ ಕೆ.ಟಿ.ಕಂಠೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಡಾ: ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಮರಿತಿಬ್ಬೇಗೌಡ

~~~

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(516)19-03-2021(10-10)ಬಿಎಸ್‌ಡಿ-ಎಕೆ

**ಕರ್ನಾಟಕ ವಿಧಾನ ಪರಿಷತ್ತು**

ಶುಕ್ರವಾರ, 19ನೇ ಮಾರ್ಚ್ 2021

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 04 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ**) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಸದನ ಪ್ರಾರಂಭವಾಗುತ್ತಿದ್ದಂತೆಯೇ ಜೆಡಿ(ಎಸ್) ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರನ್ನು ಹೊರತುಪಡಿಸಿ ಉಳಿದ ಸದಸ್ಯರೆಲ್ಲರೂ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**

**ಸಭಾಪತಿಯವರು:-** ಪ್ರಶ್ನೋತ್ತರಗಳು. ಶ್ರೀ ಅಪ್ಪಾಜಿಗೌಡರು ಪ್ರಶ್ನೆ ಕೇಳಿ.

**2020-21ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ 62 ನರ್ಸಿಂಗ್ ಮತ್ತು 40 ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಪ್ರಾರಂಭಿಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳು ಹಾಗೂ ಬೋಧಕ ಸಿಬ್ಬಂದಿಗಳ ಕೊರತೆ ಇದ್ದರೂ ಕೂಡ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವ ಕುರಿತು ಸದನ ಸಮಿತಿಯನ್ನು ರಚಿಸಲು ಒತ್ತಾಯ**

---

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ point of order ಇದೆ. ನಿನ್ನೆಯಿಂದ ಸದನವು order ನಲ್ಲಿಲ್ಲ. ನಾಡಿನ ಜನರ ಜ್ವಲಂತ ಸಮಸ್ಯೆ ಬಗ್ಗೆ ಆಡಳಿತ ಪಕ್ಷದ ಸದಸ್ಯರು ಎತ್ತಿದ ವಿಚಾರದಲ್ಲಿ ನಾವು ಧ್ವನಿಗೂಡಿಸಿ ಧರಣಿಯಲ್ಲಿದ್ದೇವೆ. ಸರ್ಕಾರ ತತ್ವಶಃ ಒಂದು ತನಿಖೆಗೆ ಒಪ್ಪಿದೆ. ಸುಮಾರು 700 B.Sc. Nursing and Paramedical College ಗಳ ಬಗ್ಗೆ ಒಂದು ಸಮಗ್ರ ತನಿಖೆಯು ವಾಸ್ತವ ನೆಲೆಗಟ್ಟಿನಲ್ಲಿ ಆಗಬೇಕೆಂದು ನಮ್ಮ ಆಗ್ರಹವಾಗಿದೆ. ಈ ನಾಡಿನ ಜನರ ಜೀವನ್ಮರಣದ ವಿಚಾರ ಹಾಗೂ ಅವರ ಆರೋಗ್ಯ ಮತ್ತು ಬದುಕಿನ ವಿಚಾರಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಇದರಲ್ಲಿ ನಾವು ಯಾವುದೇ ರಾಜಕಾರಣ ಬೆರೆಸದೇ ಸದನ ಸಮಿತಿ ಮೂಲಕ ತನಿಖೆ ಆಗಬೇಕೆಂದು ಆಗ್ರಹಿಸಿದ್ದೇವೆ. ಪಕ್ಷಾತೀತವಾಗಿ ಎಲ್ಲರ ಬೆಂಬಲ ಈ ವಿಚಾರದಲ್ಲಿ ಇದೆ. ಏಕೆಂದರೆ ಕಳೆದ ಸುಮಾರು 50-60 ವರ್ಷಗಳಿಂದ ಬೆರಳೆಣಿಕೆಯಷ್ಟು ಅಧ್ಯಾಪಕರಿದ್ದು, ಎಲ್ಲ ಶಾಲಾ ಕಾಲೇಜುಗಳಲ್ಲಿ ಪಾಠ ಮಾಡಲು ಅವರೇ ಇದ್ದರೂ ಪಾಠ ಮಾತ್ರ ಎಲ್ಲಿಯೂ ನಡೆಯುತ್ತಿಲ್ಲ. ಇವತ್ತು ಆರೋಗ್ಯ ನೋಡಿಕೊಳ್ಳುವ B.Sc. Nursing ನಂತರ degree ವಿಚಾರದಲ್ಲಿ class ನಡೆಯದೇ certificate ಕೊಡುವುದು, paramedical course ಗಳಿಗೆ class ನಡೆಯದೇ ಪರೀಕ್ಷೆಗೆ ಬರುವುದು ಅವ್ಯಾಹತವಾಗಿ ನಡೆಯುತ್ತಿದೆ. ಇದಕ್ಕೊಂದು ಇತಿಶ್ರೀ ಹಾಡಬೇಕು.

ಭಾರತೀಯ ಜನತಾ ಪಕ್ಷದ ಬಗ್ಗೆ, ಅವರ ತತ್ವ ಸಿದ್ಧಾಂತಗಳ ಬಗ್ಗೆ ನನಗೆ ನಂಬಿಕೆ ಇದೆ. ಅವರು ವಿಶೇಷವಾಗಿ ನಿಲ್ಲುವಂತಹ ಜನ. ಕುಡಿಯುವ ನೀರಿನ ವಿಚಾರದಲ್ಲಿ ಮಾನ್ಯ ಮಲ್ಕಾಪೂರೆ ರವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಸ್ತಾಪ ಮಾಡಿದಾಗ ಒಂದು ಸದನ ಸಮಿತಿಯನ್ನು ರಚನೆ ಮಾಡಿದರು. ಇವತು enquiry ಮಾಡಲು ಒಪ್ಪಿದ್ದು, ಅದು ಸದನ ಸಮಿತಿಯಿಂದ ಆಗಲಿ. ಏಕೆಂದರೆ ಅಧಿಕಾರಿಗಳ ಮಟ್ಟದಲ್ಲಿ ಕಳೆದ ಸುಮಾರು 50-60 ವರ್ಷಗಳಿಂದ ಸರಿ ಮಾಡಲು ಆಗಲಿಲ್ಲ. ಹಿಂದೆ ಇದೇ ಸದನದಲ್ಲಿ ನಾನು ಮೊದಲಿಗೆ ಸದನಕ್ಕೆ ಬಂದಾಗ ಇಂತಹದ್ದೇ medical college ನ ಹಗರಣಗಳ ಬಗ್ಗೆ ಪ್ರಸ್ತಾಪವಾದಾಗ ಡಾ: ಎಂ.ಆರ್. ತಂಗಾರವರ ಅಧ್ಯಕ್ಷತೆಯಲ್ಲಿ ಸದನ ಸಮಿತಿ ರಚನೆ ಆಯಿತು. ನಾನೂ ಆ ಸಮಿತಿಯಲ್ಲಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಇವತ್ತು ಸದನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಿರಿಯ ಸಚಿವರು ಇದ್ದಾರೆ. ಆದ್ದರಿಂದ ನಾನು ಮನವಿ ಮಾಡುವುದೇನೆಂದರೆ, ಸದನ ಸಮಿತಿಗೆ ಅವಕಾಶ ಮಾಡಿಕೊಟ್ಟು, ವಸ್ತುಸ್ಥಿತಿಯನ್ನು ಹೊರಗೆ ತೆಗೆಯಬೇಕು. ಎಲ್ಲಾ paramedical course ಗಳನ್ನು ಒಂದು streamline ಗೆ ತರೋಣ. ಇದನ್ನು ಸರಿ ಹಾದಿಗೆ ತರುವ ಕೆಲಸದಲ್ಲಿ ಮುಂದಾಗಬೇಕು. ನಾಡಿನ ಜನರಿಗೆ ಈ ಮೂಲಕ ಒಂದು ಸಂದೇಶ ಕೊಡಬೇಕು. ಆಡಳಿತ ಪಕ್ಷದ ಸದಸ್ಯರೇ ಈ ಸದನ ಸಮಿತಿಗೆ ಅಧ್ಯಕ್ಷರಾಗಿರಲಿ. ಸಮಿತಿಯಲ್ಲಿ ಆಡಳಿತ ಪಕ್ಷದ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಇರಲಿ. ಆದರೆ ವಾಸ್ತವವನ್ನು ಹೆಕ್ಕಿ ತೆಗೆದು, ಸರಿಪಡಿಸುವ ಕೆಲಸ ಆಗಬೇಕು. ಇದು ನಾಗರಿಕ ಸರ್ಕಾರದ ಜವಾಬ್ದಾರಿ ಅಲ್ಲವೇ? ನಾನು ಅತ್ಯಂತ ವಿನಮ್ರವಾಗಿ ಆಡಳಿತ ಪಕ್ಷಕ್ಕೆ ಮನವಿ ಮಾಡುತ್ತೇನೆ. ನಾವು ನಿನ್ನೆಯಿಂದ ಧರಣಿಯಲ್ಲಿದ್ದೇವೆ. ಇದಕ್ಕೆ ಮೀನ-ಮೇಷ ಅಥವಾ ಹಿಂದು ಮುಂದು ನೋಡುವುದು ಏಕೆ? ಜನರಿಗೆ ನ್ಯಾಯ ಮತ್ತು ಆರೋಗ್ಯವನ್ನು ಕೊಡಿಸುವ ವಿಚಾರದಲ್ಲಿ 700 ಕಾಲೇಜುಗಳು.....ಇಷ್ಟೆಲ್ಲಾ ವ್ಯತ್ಯಾಸಗಳ ನಡುವೆ ಒಮ್ಮೆಲೆ 102 ಕಾಲೇಜುಗಳು ಏಕಕಾಲಕ್ಕೆ ಮಂಜೂರಾಗಿವೆ. ಹಾಗಾಗಿ ಇಡೀ 700 ಕಾಲೇಜುಗಳ ಬಗ್ಗೆ ಸಮಗ್ರ ತನಿಖೆಗೆ ಅವಕಾಶ ಮಾಡಿಕೊಡಬೇಕು. ದಯಮಾಡಿ ಸರ್ಕಾರ ಇದನ್ನು ಪ್ರಕಟ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಬಹಳ ಅನುಭವಿಗಳು ಹಾಗು ವಿಚಾರಪೂರ್ಣ ವಿಚಾರಗಳನ್ನು ಮಂಡನೆ ಮಾಡಿದ್ದಾರೆ. ಈಗಾಗಲೇ ನಿನ್ನೆಯಿಂದ ವಿಚಾರಗಳು ಚರ್ಚೆಯಲ್ಲಿದ್ದು, ಮಾನ್ಯ ಸದಸ್ಯರು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ borewell ಗಳಿಗೆ ಸಂಬಂಧಪಟ್ಟಂತೆ ಸದನ ಸಮಿತಿ ರಚನೆ ಮಾಡಿರುವ ಬಗ್ಗೆ ಹೇಳಿದರು. ಈ ಸದನ ಸಮಿತಿ ರಚಿಸುವ ಮುಂಚೆ ಎರಡು ವರದಿಗಳನ್ನು ಇಲಾಖಾಧಿಕಾರಿಗಳ ಮೂಲಕ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಡೆಯಲಾಗಿದೆ. ನಿನ್ನೆ ಇದನ್ನೇ ಹೇಳಿದ್ದೇನೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಸದನ ಸಮಿತಿ ರಚನೆ ಮಾಡಿ Nursing College ಗಳಿಗೆ ಸಂಬಂಧಪಟ್ಟಂತೆ ಏಕೆ ಮಾಡುತ್ತಿಲ್ಲವೆಂದರೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಎರಡು ವರದಿಗಳನ್ನು ಇಲಾಖೆಯ ವತಿಯಿಂದ ತೆಗೆದುಕೊಂಡು ಸದನದಲ್ಲಿ ಚರ್ಚೆ ಮಾಡಿದಾಗ ಇನ್ನಷ್ಟು ಸೂಕ್ಷ್ಮ ವಿಚಾರಗಳಿವೆ ಎಂದು ಒತ್ತಾಯ ಬಂದಿದ್ದರಿಂದ ಸದನ ಸಮಿತಿ ರಚನೆ ಮಾಡಲಾಯಿತು ಎಂದು ಹೇಳಿದ್ದೇನೆ. ಇಲ್ಲಿಯೂ ಮಾನ್ಯ ಮಂತ್ರಿಗಳು 3 ತಿಂಗಳಲ್ಲಿ ಒಂದು ತನಿಖಾ ವರದಿಯನ್ನು ತರಿಸಿ ಸದನದಲ್ಲಿ ಮಂಡಿಸುತ್ತೇವೆ. ಮಂಡನೆಯ ನಂತರ ಮಾನ್ಯ ಸದಸ್ಯರಿಗೆ ತೃಪ್ತಿಯಾಗದಿದ್ದರೆ...... ಮಾನ್ಯ ಸದಸ್ಯರೆಲ್ಲರಿಗೂ ತೃಪ್ತಿಯಾಗುತ್ತದೆಂದು ನಮಗೆ ವಿಶ್ವಾಸ ಇದೆ. ತಪ್ಪುಗಳು ಏನೇ ಇದ್ದರೂ ಮುಕ್ತವಾದ ವಾತಾವರಣದಲ್ಲಿ ಒಳ್ಳೆಯ ತಂಡದ ಮೂಲಕ ತನಿಖಾ ವರದಿ ತರಿಸುವ ಬಗ್ಗೆ ಹೇಳಿದ್ದಾರ. ನಾನು ಮತ್ತೊಮ್ಮೆ ಮಾನ್ಯ ಶ್ರೀಕಂತೇಗೌಡರು, ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ತಿಪ್ಪೇಸ್ವಾಮಿಯವರಿಗೆ ವಿನಂತಿ ಮಾಡುತ್ತೇನೆ, ಇವರೆಲ್ಲರೂ ಸುದೀರ್ಘವಾದ ರಾಜಕಾರಣದ ಅನುಭವವನ್ನು ಹೊಂದಿರುವ ಹಿರಿಯರಾಗಿದ್ದು, ಇಲ್ಲಿಯವರೆಗೂ ಸರ್ಕಾರದ ಒಳ್ಳೆಯ ಕೆಲಸಗಳಿಗೆ ಸಹಕಾರವನ್ನು ಕೊಟ್ಟಿದ್ದಾರೆ ಹಾಗೂ ಅದೇ ರೀತಿ ಮುಂದೆಯೂ ಕೊಡುತ್ತಾರೆ ಎಂದು ಆಶಯವನ್ನು ಹೊಂದಿದ್ದೇವೆ. ಆ ಹಿನ್ನೆಲೆಯಲ್ಲಿ ಅವರು ಸರ್ಕಾರದ ನಿಲುವನ್ನು ಒಪ್ಪಿಕೊಂಡು ಧರಣಿ ಕೈಬಿಟ್ಟು ವಾಪಸ್ಸು ಬರಬೇಕು. ಅವರು ಹೇಳಿದಂತೆ ಎಂತಹ ಅಧಿಕಾರಿಗಳ ತಂಡದಿಂದ ತನಿಖೆ ಮಾಡಿಸಬೇಕು ಎಂದು ಅಧಿಕಾರಿಗಳಿದ್ದರೆ ಅವರ ಹೆಸರುಗಳನ್ನು ಹೇಳಲಿ. ಅಂತಹ ಅಧಿಕಾರಿಯ ನೇತೃತ್ವದಲ್ಲಿ ಸಮಿತಿಯನ್ನು ರಚನೆ ಮಾಡೋಣ. ಒಟ್ಟಾರೆ ಈ ಸಮಸ್ಯೆಯನ್ನು ಪರಿಹಾರ ಮಾಡಲು ಸರ್ಕಾರವು ಮುಕ್ತವಾದ ಮನಸ್ಸಿನಿಂದ ಒಪ್ಪಿಕೊಂಡಿದೆ. ಆದರೆ ಪ್ರತಿ ಬಾರಿ ಆರಂಭದಲ್ಲಿ 'ಸದನ ಸಮಿತಿ ಮಾಡಿ' ಎಂದು ಬೇಡಿಕೆ ಇಡುವುದು, ಸರ್ಕಾರವು 'ಆಯಿತು' ಎಂದು ಹೇಳುವುದು ಸತ್ಸಂಪ್ರದಾಯದ ಲಕ್ಷಣವಲ್ಲ. ಜೆಡಿ(ಎಸ್) ನ ಹಿರಿಯ ಸದಸ್ಯರಿಗೆ ನಮ್ರತೆಯಿಂದ ವಿನಂತಿ ಮಾಡುವುದೇನೆಂದರೆ ದಯವಿಟ್ಟು ಸದನವನ್ನು ನಡೆಸಲು ಅನುವು ಮಾಡಿಕೊಡಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂತೇಗೌಡರು ಬಹಳ ಗಂಭೀರವಾದ ವಿಚಾರದ ಬಗ್ಗೆ ನಿನ್ನೆಯಿಂದಲೂ ಪ್ರತಿಭಟನೆ ಮಾಡುತ್ತಿದ್ದಾರೆ. ಇದು ರಾಜ್ಯದ ಪ್ರತಿಷ್ಠೆಯ ಪ್ರಶ್ನೆ ಹಾಗೂ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯದ ವಿಚಾರವೂ ಆಗಿದೆ. ತಾವು ಉದಾಹರಣೆಯನ್ನು ನೋಡುವುದಾದರೆ ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು Chairman ಆಗಿದ್ದಾಗ ಮಾನ್ಯ ನಾರಾಯಣಸ್ವಾಮಿಯವರು ಗಂಭೀರವಾದ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆರೋಪವನ್ನು ಪರೋಕ್ಷವಾಗಿ ಮಾಡಿದಾಗ, ಈ ವಿಚಾರ ಸದನದಲ್ಲಿ ಚರ್ಚೆಯಾಗಿ ಒಂದು ಸದನ ಸಮಿತಿ ರಚನೆ ಸಂದರ್ಭದಲ್ಲಿ ನಾವೆಲ್ಲರೂ unanimous ಆಗಿ ಒಪ್ಪಿಕೊಂಡಿದ್ದೆವು.

**(ಮುಂದು)**

**(517)/19.03.2021/10.20/ಹೆಚ್‌ವಿಃಆರ್‌ಎನ್**

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದು):**

ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ದ್ವಂದ್ವ ನೀತಿ ನಡೆಯುವುದಿಲ್ಲ. ನಿನ್ನೆ ನಿಯಮಾವಳಿಗಳ ಪುಸ್ತಕದಿಂದ ನಿಯಮಗಳನ್ನು ಉಲ್ಲೇಖ ಮಾಡಿರುವುದು ಮತ್ತು ಈ ದಿನ ನಮ್ಮ ಸಭಾನಾಯಕರು ಹೇಳುತ್ತಿರುವುದನ್ನು ನೋಡಿದರೆ, it is like devil preaching the scriptures ಎನ್ನುವಂತಾಗುತ್ತದೆ. ದೆವ್ವಗಳು ಭಗವದ್ಗೀತೆ ಹೇಳುವುದಕ್ಕಾಗುವುದಿಲ್ಲ. ಇದು ಬಹಳ ಗಂಭೀರವಾಗಿರುವ ವಿಚಾರವಾಗಿದೆ. ಇದನ್ನು ಸರ್ಕಾರದವರು ಬಹಳ ಗಂಭೀರವಾಗಿ ಪರಿಗಣಿಸಿ ಸದನ ಸಮಿತಿ ರಚನೆ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ನಾವು ಈ ವಿಚಾರದ ಮೇಲಿನ ಚರ್ಚೆಯಲ್ಲಿ ಏತಕ್ಕೋಸ್ಕರ ಭಾಗಿಗಳಾಗುತ್ತಿಲ್ಲ ಎನ್ನುವುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದೇವೆ. ಸಚಿವರ ನೈತಿಕತೆಯ ಪ್ರಶ್ನೆ ಉದ್ಭವವಾದ ಹಿನ್ನೆಲೆಯಲ್ಲಿ ನಾವು ಈ ಚರ್ಚೆಯಲ್ಲಿ ಭಾಗಿಗಳಾಗಲಿಲ್ಲ. ಈ ವಿಚಾರ ಜನಸಾಮಾನ್ಯರಿಗೆ ಸಂಬಂಧಪಟ್ಟಿರುವುದಾಗಿದೆ. ಆದ್ದರಿಂದ ದಯವಿಟ್ಟು ಸದನ ಸಮಿತಿಯನ್ನು ರಚನೆ ಮಾಡಿ ಕೂಲಂಕಷವಾದ ತನಿಖೆ ನಡೆಯುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಭಾರತೀಯ ಜನತಾ ಪಕ್ಷದವರು, 'ನಾವು ಭ್ರಷ್ಟಾಚಾರದ ವಿರುದ್ಧ' 'ಭ್ರಷ್ಟಾಚಾರ ಮುಕ್ತ ಭಾರತ' 'party with difference' ಎಂದು ಹೇಳಿಕೊಳ್ಳುತ್ತಾರೆ. ಈ ರೀತಿ ಇರಬೇಕಾದರೆ, ಸದನ ಸಮಿತಿ ರಚನೆ ಮಾಡುವುದಕ್ಕೆ ಇವರುಗಳು ಏತಕ್ಕೋಸ್ಕರ ಹೆಸರಿಕೊಳ್ಳುತ್ತಿದ್ದಾರೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇವರುಗಳು ಸತ್ಯ ಹರಿಶ್ಚಂದ್ರನ ಮನೆ ಪಕ್ಕದಲ್ಲಿ ಇದ್ದವರು, ಭಯಪಡುವ ಅವಶ್ಯಕತೆ ಇಲ್ಲ. ಸದನ ಸಮಿತಿ ರಚನೆಯಾಗಿ ಈ ವಿಚಾರದ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾಗಿ ಆ ಮೂಲಕ ನ್ಯಾಯಬದ್ಧ ವಿಚಾರಣೆ ನಡೆಯಬೇಕೆನ್ನುವುದು ನಮ್ಮ ವಿನಂತಿಯಾಗಿದೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಮತ್ತು ನಮ್ಮ ನಡುವೆ ಒಂದು ಸಣ್ಣ ವ್ಯತ್ಯಾಸವಿದೆ. ತಾತ್ವಿಕವಾಗಿ ತನಿಖೆಗೆ ಅವರು ಒಪ್ಪಿದ್ದಾರೆ. ಹಿಂದೆ ನಾನು ಈ ಸದನಕ್ಕೆ ಹೊಸದಾಗಿ ಸದಸ್ಯನಾಗಿ ಆಯ್ಕೆಗೊಂಡಾಗ ಡಾ॥ಎಂ.ಆರ್.ತಂಗಾರವರು, ಮೆಡಿಕಲ್ ಕಾಲೇಜಿನಲ್ಲಿ ನಡೆದಿರುವ ಪರೀಕ್ಷಾ ಹಗರಣಗಳ ಬಗ್ಗೆ ಬಹಳ ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದರು. ಆಶ್ಚರ್ಯದ ಸಂಗತಿಯೆಂದರೆ, ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದವರು ಡಾ॥ಎಂ.ಆರ್.ತಂಗಾರವರ ಅಧ್ಯಕ್ಷತೆಯಲ್ಲಿಯೇ ಒಂದು ಸಮಿತಿಯನ್ನು ರಚನೆ ಮಾಡಿದರು. ಆ ಸಮಿತಿ ತನಿಖಾ ವರದಿಯನ್ನು ಕೊಟ್ಟಿತ್ತು. ಆ ವಿಚಾರದಲ್ಲಿ ನ್ಯಾಯ ದೊರಕಿತ್ತು. ಇವತ್ತು ಮತ್ತೊಂದು ಸುದೈವದ ಸಂಗತಿಯೆಂದರೆ, ಅಂತಹದೇ ವಿಚಾರವನ್ನು ಈಗ ಮಾನ್ಯ ಸದಸ್ಯರಾಗಿರುವ ಶ್ರೀ ಎನ್.ರವಿಕುಮಾರ್‌ರವರು ಪ್ರಸ್ತಾಪ ಮಾಡಿದ್ದಾರೆ. ಆಡಳಿತ ಪಕ್ಷದ ಸದಸ್ಯರು ಇದಕ್ಕೆ ಧ್ವನಿಗೂಡಿಸಿದ್ದಾರೆ. ವೈದ್ಯಕೀಯ ಸಚಿವರಾಗಿರುವ ಡಾ॥ಕೆ.ಸುಧಾಕರ್‌ರವರು ಸ್ವತಃ ವೈದ್ಯರಾಗಿದ್ದಾರೆ, ಅವರಿಗೆ ಇದರ ಬಗ್ಗೆ ಸತ್ಯಾಂಶಗಳು ಗೊತ್ತಿದೆ. 'ಇಲ್ಲಿ ಲೋಪಗಳಿವೆ ಎನ್ನುವ ಅಂಶವನ್ನು ಅವರು ಒಪ್ಪಿಕೊಂಡಿದ್ದಾರೆ. ಕಳೆದ 60-70 ವರ್ಷಗಳಿಂದ ಆ ಲೋಪಗಳನ್ನು ಸರಿಪಡಿಸುವಂತಹ ಕೆಲಸ ನಮ್ಮ ಅಧಿಕಾರಿಗಳಿಂದ ಆಗಿಲ್ಲ. ಅಧಿಕಾರಿಗಳಿಂದ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗದೇ ಇರುವ ಕಾರಣದ ಹಿನ್ನೆಲೆಯಲ್ಲಿ ಆಳುವ ಪಕ್ಷದ ಸದಸ್ಯರ ಅಧ್ಯಕ್ಷತೆಯಲ್ಲಿಯೇ ಒಂದು ಸದನ ಸಮಿತಿಯನ್ನು ರಚನೆ ಮಾಡಿ ಎಂದು ನಾವು ಸರ್ಕಾರವನ್ನು ಒತ್ತಾಯಿಸುತ್ತಿದ್ದೇವೆ. ಇದರಲ್ಲಿ ತಪ್ಪೇನಿದೆ? ಅಧಿಕಾರಿಗಳಿಗೆ 'ಈ ಮಾರ್ಗವಾಗಿ ಹೋಗಿ, ಇದನ್ನು ಸರಿದಾರಿಗೆ ತನ್ನಿ, ಮಕ್ಕಳ ಭವಿಷ್ಯವನ್ನು ಉಳಿಸಿ, ಈ ನಾಡಿನ ಜನರ ಜೀವವನ್ನು ಉಳಿಸಿ' ಎನ್ನುವ ನಿಟ್ಟಿನಲ್ಲಿ ನಾವುಗಳು ಮಾರ್ಗದರ್ಶನ ಮಾಡಬೇಕಾಗುತ್ತದೆ. ಇದು ತಪ್ಪೇ? In principle, the Minister has agreed. 'ಈ ವಿಚಾರವನ್ನು ನಾವು ಯಾವುದೇ ವಿಚಾರಣೆಗೆ ಒಳಪಡಿಸಿದರೂ ಸಹ ಬಹಳಷ್ಟು ಕಾಲೇಜುಗಳು ಮುಚ್ಚಿ ಹೋಗುತ್ತವೆ' ಎನ್ನುವ ಅಂಶವನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. 'ಲೋಪದೋಷಗಳು ಇವೆ' ಎನ್ನುವುದನ್ನು ಮಾನ್ಯ ಸಚಿವರು ಒಪ್ಪಿದ ಮೇಲೆ ಅದರ ಬಗ್ಗೆ ಸಮಗ್ರ ತನಿಖೆ ಆಗಬೇಕಾಗಿದೆ. ದಯಮಾಡಿ ನಾನು ಕೈಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಇದರಲ್ಲಿ ಯಾವುದೇ ರೀತಿಯ ರಾಜಕಾರಣವನ್ನು ಬೆರೆಸಬಾರದು. ಈ ನಾಡಿನ ಜನರ ಆರೋಗ್ಯ ಮತ್ತು ಜೀವನದ ವಿಚಾರದಲ್ಲಿ ಯಾರೂ ಹುಡುಗಾಟ ಆಡುವುದು ಅಥವಾ ತಮಾಷೆ ಮಾಡುವುದು ಬೇಡವೆನ್ನುವುದು ನನ್ನ ವಿನಂತಿಯಾಗಿದೆ. ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಇಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಬೇಕಾದರೆ, ಸದನ ಸಮಿತಿಯನ್ನು ರಚನೆ ಮಾಡಿದರೆ ಮಾತ್ರ ನ್ಯಾಯ ದೊರೆಯುತ್ತದೆ ಮತ್ತು ಅಲ್ಲಿ ಶಿಸ್ತಿನ ವ್ಯವಸ್ಥೆ ನಿರ್ಮಾಣವಾಗುತ್ತದೆ ಎನ್ನುವುದು ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಆಗ್ರಹವಾಗಿದೆಯೇ ಹೊರತು ಇದರ ಬಗ್ಗೆ ಬೇರೆ ರೀತಿಯ ಹುನ್ನಾರ ಇಲ್ಲ. ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಿಲ್ಲ, ಇದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿರುವಂತಹ ಆಡಳಿತ ಪಕ್ಷದ ಸದಸ್ಯರಾಗಿರುವ ಮಾನ್ಯ ಎನ್.ರವಿಕುಮಾರ್‌ರವರು ಈ ಪ್ರಸ್ತಾವನೆಯನ್ನು ಮಂಡನೆ ಮಾಡುವ ಮೂಲಕ ನಮ್ಮೆಲ್ಲರನ್ನು ಎಚ್ಚರಿಸಿದ್ದಾರೆ. ಈ ವಿಚಾರಕ್ಕೆ ಒಂದು ತಾರ್ಕಿಕ ಅಂತ್ಯ ಸಿಗಬೇಕಾಗಿದೆ. ಆ ವ್ಯವಸ್ಥೆಯನ್ನು ಸರಿಪಡಿಸುವಂತಹ ಜವಾಬ್ದಾರಿಯುತ ಜನಪ್ರತಿನಿಧಿಗಳಾಗಿ ನಾವು ಮಾಡಬೇಕಾಗಿದೆ. ಆದ್ದರಿಂದ ಮುಕ್ತ ಮನಸ್ಸಿನಿಂದ ಸರ್ಕಾರ ಸದನ ಸಮಿತಿ ರಚನೆಯ ಬಗ್ಗೆ ಘೋಷಣೆ ಮಾಡಬೇಕೆಂದು ಈ ನಾಡಿನ ಜನರ ಪರವಾಗಿ ಪ್ರಾರ್ಥಿಸುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನಿನ್ನೆಯಿಂದ ಇಲ್ಲಿಯವರೆಗೆ ಈ ಸದನ deadlock ಆಗಿದೆ. ಈ ನಾಡಿನ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ನಾವು ಈ ಸದನದಲ್ಲಿ ಚರ್ಚೆ ಮಾಡಬೇಕಾಗಿದೆ. ಈ ಭಾಗದ ಸದಸ್ಯರು ಮತ್ತು ಆ ಭಾಗದ ಸದಸ್ಯರು ಆಯವ್ಯಯ ಅಧಿವೇಶನದಲ್ಲಿ ನಾಡಿನ ಆರೂವರೆ ಕೋಟಿ ಜನರ ಸಮಸ್ಯೆಗಳನ್ನು ಎಳೆಎಳೆಯಾಗಿ ಈ ಸದನದ ಮುಖಾಂತರ, ಈ ಶಕ್ತಿಸೌಧದ ಮುಖಾಂತರ ಜನತೆಗೆ ನ್ಯಾಯ ಒದಗಿಸಿಕೊಡಬೇಕೆನ್ನುವ ಉದ್ದೇಶದಿಂದ ಎಲ್ಲರೂ ಉತ್ಸುಕತೆಯಿಂದ ಕಾತುರತೆಯಿಂದ ಮತ್ತು ಸಮಸ್ಯೆ ಬಗೆಹರಿಯುತ್ತದೆ ಎನ್ನುವ ವಿಶ್ವಾಸದಿಂದ ಬಂದಿದ್ದೇವೆ. ಸುಮಾರು 700 ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜುಗಳ ಬಗ್ಗೆ ಈ ಸದನದಲ್ಲಿ ಪ್ರಸ್ತಾಪವಾದಾಗ, ಜಾತ್ಯಾತೀತ ಜನತಾದಳದ ಮಾನ್ಯ ಸದಸ್ಯರುಗಳು ನಿನ್ನೆಯಿಂದ ಈ ವಿಚಾರವಾಗಿ ತನಿಖೆ ನಡೆಸುವುದಕ್ಕೆ ಒಂದು ಸದನ ಸಮಿತಿಯನ್ನು ರಚನೆ ಮಾಡಬೇಕೆನ್ನುವ ಬೇಡಿಕೆಯನ್ನಿಟ್ಟಿದ್ದಾರೆ. ಸುಮಾರು 700 ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜುಗಳೆಂದರೆ ಇದು ಬಹಳ ದೊಡ್ಡ ಸಂಖ್ಯೆಯಾಗಿದೆ. ಈ 700 ಸಂಸ್ಥೆಗಳಿಂದ ಹೊರ ಬರುವ ವಿದ್ಯಾರ್ಥಿಗಳಿಂದ ಈ ನಾಡಿನ ಜನರ ಆರೋಗ್ಯದ ಮೇಲೆ ಆಗುವ ಪರಿಣಾಮದ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಈ 700 ಸಂಸ್ಥೆಗಳಿಗೆ ಸರಿಯಾದ ಮೂಲಭೂತ ಸೌಲಭ್ಯಗಳಿಲ್ಲ. ಇದರ ಜೊತೆಗೆ ಮನೆಯಲ್ಲಿಯೇ ಕುಳಿತುಕೊಂಡಿರುವವರಿಗೂ ಸಹ ಪದವಿಗಳನ್ನು ಕೊಡುತ್ತಿದ್ದಾರೆ ಎನ್ನುವ ಆರೋಪ ಕೇಳಿ ಬಂದಿದೆ. ಈ ರೀತಿ ತರಬೇತಿಯನ್ನು ಪಡೆದುಕೊಂಡಿರುವ ನರ್ಸ್‌ಗಳು ಮತ್ತು ಪ್ಯಾರಮೆಡಿಕಲ್ ಸಿಬ್ಬಂದಿಗಳು ಬಂದು ಆಸ್ಪತ್ರೆಯಲ್ಲಿ ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆ ಎನ್ನುವುದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನ್ನ ಪ್ರಶ್ನೆಯಾಗಿದೆ. ಈ ನಾಡಿನ ಜನರ ಆರೋಗ್ಯವನ್ನು ಸಹ ನಾವು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಇದೊಂದು ಮಹತ್ವದ ವಿಚಾರವಾಗಿರುವುದರಿಂದ ಸರ್ಕಾರದವರು ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳದೇ, let it be enquired. ಮಾನ್ಯ ಸದಸ್ಯರು ಏನು ಬೇಡಿಕೆ ಇಟ್ಟಿದ್ದಾರೆ ಆ ಸಂಸ್ಥೆಯ ಮೂಲಕ ಸರ್ಕಾರ ತನಿಖೆಯನ್ನು ನಡೆಸಬೇಕಾಗುತ್ತದೆ. ಆಡಳಿತ ಪಕ್ಷದ ಸದಸ್ಯರೇ ಆ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಆ 700 ಸಂಸ್ಥೆಗಳಿಗೆ ತೊಂದರೆಯನ್ನುಂಟು ಮಾಡಬೇಕೆನ್ನುವುದು ಇದರ ಉದ್ದೇಶವಲ್ಲ. ಯಾರು ಕಾನೂನು ಬಾಹಿರವಾಗಿ ಸರಿಯಾದ ರೀತಿಯಲ್ಲಿ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುತ್ತಿಲ್ಲ ಅವರಿಗೆ ಇದು ಅನ್ವಯವಾಗುತ್ತದೆ. ಅರ್ಹತೆ ಇಲ್ಲದೇ ಇರುವವರು ಸಹ ಇಂತಹ ಸಂಸ್ಥೆಗಳನ್ನು ನಡೆಸುವುದಕ್ಕೆ ಪರವಾನಗಿ ಪಡೆದಿದ್ದಾರೆನ್ನುವ ಸುದ್ದಿ ಈ ನಾಡಿನ ಉದ್ದಗಲಕ್ಕೂ ಹಬ್ಬಿದೆ. ಆ ದೃಷ್ಟಿಯಿಂದ ಬಹಳ ಯೋಗ್ಯವಾಗಿರುವ, quite reasonable demand they have put- forth before this Government. ಸರ್ಕಾರ ಸದನ ಸಮಿತಿಯನ್ನು ರಚನೆ ಮಾಡಿ ತನಿಖೆ ನಡೆಸಲಿ ಎನ್ನುವುದು ಅವರ ಅಭಿಪ್ರಾಯವಾಗಿದೆ. ಸರ್ಕಾರ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬಾರದು. ಈ ಸದನ ನಡೆಯಬೇಕು, ಈ ಸದನದ ಮೂಲಕ ನಾಡಿನ ಕಲ್ಯಾಣವಾಗಬೇಕು. ಈ ನಾಡಿನ ಆರೂವರೆ ಕೋಟಿ ಜನರ ಸಮಸ್ಯೆ ಇಲ್ಲಿ ಬಗೆಹರಿಯಬೇಕಾಗಿದೆ ಎನ್ನುವ ಉದ್ದೇಶದಿಂದ ಆಯವ್ಯಯದ ಅಧಿವೇಶನವನ್ನು ಮಾರ್ಚ್ 31ರವರೆಗೆ ನಡೆಸಲಾಗುತ್ತಿದೆ. ನಿನ್ನೆಯೂ ಈ ಸದನದ ಸಮಯ ಹಾಳಾಗಿದೆ. ನಿನ್ನೆ ತಾವು ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ನಾವು ಆಕ್ಷೇಪಣೆ ವ್ಯಕ್ತಪಡಿಸುವುದಿಲ್ಲ. ನಿನ್ನೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಂದಿದ್ದ ಗಮನಸೆಳೆಯುವ ಸೂಚನೆಗಳಿಗೆ ಮತ್ತು ನಿಯಮ 330ರ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳನ್ನು laid on the table of the House ಎಂದಷ್ಟೇ ಹೇಳಿ ಉತ್ತರಗಳನ್ನು ಮಂಡಿಸಲಾಯಿತು. ಇವುಗಳನ್ನು ಸದನದಲ್ಲಿ ಚರ್ಚೆ ಮಾಡಿದ್ದರೆ ಎಷ್ಟೋ ಸಲಹೆಗಳು ಬರುತ್ತಿದ್ದವು ಆ ಸಲಹೆಗಳ ಮೂಲಕ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತಿದ್ದವು. ಆದರೆ, ದುರ್ದೈವದ ಸಂಗತಿಯೆಂದರೆ, ಜಾತ್ಯಾತೀತ ಜನತಾ ಪಕ್ಷದ ಸದಸ್ಯರ ಧರಣಿಯಿಂದಾಗಿ ನಿನ್ನೆ ಆ ರೀತಿ ಆಯಿತು. ಇವತ್ತೂ ಸಹ ಅದೇ ಮುಂದುವರಿಯುತ್ತಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಸಭಾಪತಿಯವರೇ, ಸರ್ಕಾರದವರನ್ನು, ನನ್ನ ಸ್ನೇಹಿತರಾಗಿರುವ ಜಾತ್ಯಾತೀತ ಜನತಾದಳದ ಸದಸ್ಯರುಗಳನ್ನು ಮತ್ತೊಮ್ಮೆ ತಮ್ಮ ಕೊಠಡಿಗೆ ಕರೆದು ಮಾತುಕತೆ ನಡೆಸಬೇಕೆನ್ನುವುದು ನನ್ನ ಸಲಹೆಯಾಗಿದೆ. ಈಗಾಗಲೇ ಒಂದು ಸುತ್ತಿನ ಮಾತುಕತೆಯನ್ನು ತಾವು ನಡೆಸಿದ್ದೀರಿ, ಎರಡನೆಯ ಸುತ್ತಿನ ಮಾತುಕತೆ ನಡೆಸುವುದರಲ್ಲಿ ಏನೂ ತಪ್ಪಿಲ್ಲ. It is quite reasonable, most

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

genuine and most judicious demand ಸರ್ಕಾರಕ್ಕೆ ಮಾಡಿದ್ದಾರೆ. ಸದನ ಸಮಿತಿ ರಚನೆ ಮಾಡುವುದರಿಂದ ಆಕಾಶ ಕಳಚಿ ಮೇಲೆ ಬೀಳುವುದಿಲ್ಲ. ಈ ನಾಡಿನ ಜನತೆಯ ಹಿತದೃಷ್ಟಿಯಿಂದ ಮತ್ತು ಆರೋಗ್ಯದ ದೃಷ್ಟಿಯಿಂದ ಅವರು ಕೇಳುತ್ತಿರುವುದು ನ್ಯಾಯಬದ್ಧವಾದ, ಸಮಯೋಚಿತವಾಗಿರುವ ಮತ್ತು ಪ್ರಾಮಾಣಿಕವಾಗಿರುವ ಬೇಡಿಕೆಯನ್ನು ಇಟ್ಟಿದ್ದಾರೆ, ಅದನ್ನು ಸದನ ಸಮಿತಿ ರಚನೆ ಮಾಡುವ ಮೂಲಕ ಪೂರೈಸಬೇಕಾಗಿದೆ. ಇದಕ್ಕಾಗಿ ತಾವು ಸದನವನ್ನು ಸ್ವಲ್ಪ ಕಾಲದವರೆಗೆ ಮುಂದೂಡಿ, ಆಡಳಿತ ಪಕ್ಷದವರನ್ನು ಮತ್ತು ಜಾತ್ಯಾತೀತ ಜನತಾದಳದ ಸದಸ್ಯರುಗಳನ್ನು ತಮ್ಮ ಕೊಠಡಿಗೆ ಕರೆದು ಚರ್ಚೆ ಮಾಡಿದರೆ ಒಳ್ಳೆಯದು. ಇದೇ ರೀತಿ ಸದನದ ಸಮಯ ಹಾಳಾದರೆ ಇಡೀ ಕನ್ನಡ ನಾಡಿಗೆ ಒಂದು ತಪ್ಪು ಸಂದೇಶ ಹೋಗುತ್ತದೆ. ಸ್ವಲ್ಪ ಕಾಲದವರೆಗೆ ಸದನವನ್ನು ಮುಂದೂಡಿ ಚರ್ಚೆ ಮಾಡುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯವಾಗಿದೆ.

**ಸಭಾಪತಿಯವರುಃ–** ಮಾನ್ಯ ಸಭಾನಾಯಕರೇ, ವಿಷಯದ ಗಂಭೀರತೆಯನ್ನು ಎಲ್ಲರೂ ಅರ್ಥ ಮಾಡಿಕೊಂಡಿದ್ದಾರೆ. ಇದೊಂದು ಬಹಳ ಗಂಭೀರವಾಗಿರುವ ವಿಷಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಸರ್ಕಾರ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ನಮ್ಮ ಸಹಮತಿ ಇದ್ದರೂ ಸಹ ತೀರ್ಮಾನ ತೆಗೆದುಕೊಳ್ಳಬೇಕಾಗಿರುವವರು ಸರ್ಕಾರದವರು. ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡು ಇದಕ್ಕೊಂದು ತೆರೆ ಎಳೆದರೆ, ಈ ಸದನ ಸುಸೂತ್ರವಾಗಿ ನಡೆಯುತ್ತದೆ. ಸರ್ಕಾರ ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡುವುದು ಸೂಕ್ತವೆಂದು ನನಗನ್ನಿಸುತ್ತಿದೆ. ಜಾತ್ಯಾತೀತ ಜನತಾ ದಳ ಪಕ್ಷದ ಸದಸ್ಯರು ಇಡೀ ಸದನದ ಘನತೆ ಗೌರವ ಸರ್ಕಾರ ತೆಗೆದುಕೊಳ್ಳುವ ನಿರ್ಧಾರದ ಮೇಲೆ ಅವಲಂಭಿತವಾಗಿದೆಯೆಂದು ಹೇಳಿದ್ದಾರೆ. ಸದನ ಸಮಿತಿ ರಚನೆ ಮಾಡಿದರೆ, ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಬೇರೆ ಸಂಸ್ಥೆಗಳಿಂದ ತನಿಖೆ ನಡೆಸಿದರೆ, ಭ್ರಷ್ಟಾಚಾರ ಹಾಗೆಯೇ ಉಳಿಯುತ್ತದೆ. ಸದನ ಸಮಿತಿ ರಚನೆಯಾದರೆ, ಒಂದು ತೀರ್ಮಾನಕ್ಕೆ ಬರಬಹುದು. ಈ ನಾಡಿನ ಜನತೆಗೊಂದು ಒಳ್ಳೆಯ ಸಂದೇಶವನ್ನು ನೀಡಿದಂತಾಗುತ್ತದೆ ಎನ್ನುವುದು ಅವರ ಒಟ್ಟಾರೆ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ವಿನಾಃ ಕಾರಣ ಸದನವನ್ನು ಮುಂದೂಡುವುದು, ಸದನದ ಸಮಯವನ್ನು ವ್ಯರ್ಥ ಮಾಡುವುದು ಸರಿ ಅನಿಸುವುದಿಲ್ಲ. ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅನೇಕ ವಿಚಾರಗಳ ಮೇಲೆ ಚರ್ಚೆ ನಡೆಸುವುದಕ್ಕೆ ಲಿಸ್ಟ್ ಆಗಿವೆ. ಇವೆಲ್ಲರೂ ರದ್ದಾಗುತ್ತವೆ. ನಾನು ಎಷ್ಟು ಬಾರಿ ಹೇಳುವುದು, ಸದನ ಆರ್ಡರ್‌ನಲ್ಲಿ ಇಲ್ಲವೆಂದು ಹೇಳುತ್ತಾರೆ, ಆದರೆ, ನಿಯಮಗಳನ್ನು ಯಾರೂ ಪಾಲಿಸುವುದಿಲ್ಲ. ಈ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಾದರೆ ಸಭಾಪತಿಯಾದವರು ಏನು ಮಾಡುವುದಕ್ಕೆ ಸಾಧ್ಯವಿದೆ? ಆದ್ದರಿಂದ ನಾನು ಮತ್ತೊಮ್ಮೆ ವಿನಂತಿ ಮಾಡುತ್ತಿದ್ದೇನೆ. ಇಬ್ಬರು ಉಪ ಮುಖ್ಯಮಂತ್ರಿಗಳು ಮತ್ತು ಸಭಾನಾಯಕರು ಈ ಸದನದಲ್ಲಿ ಉಪಸ್ಥಿತರಿದ್ದೀರಿ, ಒಂದು ಹತ್ತು ನಿಮಿಷಗಳ ಕಾಲ ನಾನು ಈ ಸದನವನ್ನು ಮುಂದೂಡುತ್ತಿದ್ದೇನೆ. ದಯಮಾಡಿ ಆಡಳಿತ ಪಕ್ಷದ ಸದಸ್ಯರು, ಜಾತ್ಯಾತೀತ ಜನತಾ ದಳ ಪಕ್ಷದ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರುಗಳೆಲ್ಲರೂ ನನ್ನ ಕೊಠಡಿಗೆ ಬನ್ನಿ ಚರ್ಚೆ ಮಾಡಿ ಇದಕ್ಕೊಂದು ತೀರ್ಮಾನವನ್ನು ತೆಗೆದುಕೊಳ್ಳೋಣ. ತೀರ್ಮಾನಕ್ಕೆ ಬರಲು ಸಾಧ್ಯವಾಗದಿದ್ದರೆ, ಸದನವನ್ನು ಮುಂದೂಡಬೇಕಾಗುತ್ತದೆ. ಉಪ ಮುಖ್ಯಮಂತ್ರಿಗಳೇ, ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡುವುದು ಸೂಕ್ತವೆಂದು ನನಗನಿಸುತ್ತಿದೆ ತಮ್ಮ ಅಭಿಪ್ರಾಯವೇನು?

**ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ):-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಅಭಿಪ್ರಾಯದಂತೆ ಆಗಲಿ.

**ಸಭಾಪತಿಯವರು:-** ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

**(518) 19-03-2021(11-20)ಎಂವಿ-ಜಿಆರ್**

**(ಬೆಳಗ್ಗೆ 10 ಗಂಟೆ 29 ನಿಮಿಷಕ್ಕೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಬೆಳಗ್ಗೆ 11 ಗಂಟೆ 21 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಸದನ ಪ್ರಾರಂಭವಾಗುತ್ತಿದ್ದಂತೆಯೇ ಜಾತ್ಯಾತೀತ ಜನತಾದಳ ಪಕ್ಷದ ಸದಸ್ಯರುಗಳು ಸದನದ ಬಾವಿಗಿಳಿದು ಧರಣಿಯನ್ನು ಮುಂದುವರೆಸಿದರು)**

**ಶ್ರೀ ಸಿ.ಎಂ.ಇಬ್ರಾಹಿಂ:-**ಮಾನ್ಯ ಸಭಾಪತಿಯವರೇ, ಅಂತಿಮವಾಗಿ ಏನಾದರೂ ತೀರ್ಮಾನವಾಗಿದೆಯೇ?

**ಸಭಾಪತಿಯವರು:-** ಮಾನ್ಯ ಸಿ.ಎಂ.ಇಬ್ರಾಹಿಂರವರೆ ನಾನು ಹೇಳುವುದಕ್ಕೆ ಬಿಡುತ್ತೀರಾ ಇಲ್ಲವೇ?

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ತಮ್ಮ ಜೊತೆಯಲ್ಲೇ ಒಂದು ಚರ್ಚೆಯಾಗಿ ಬಿಟ್ಟರೆ ಚೆನ್ನಾಗಿರುತ್ತದೆ. ಸದನ ಸಮಿತಿ ಬೇಡ. ಏಕೆಂದರೆ, ಸದನ ಸಮಿತಿ ರಚನೆಯ ಬಗ್ಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಮಾನವಿದೆ. ಆದರೆ, ನಮಗೆ ನಿಮ್ಮ ಮೇಲೆ ವಿಶ್ವಾಸವಿದೆ. ಆ ಕಡತ ತಮ್ಮ ಬಳಿಗೆ ಬರಲಿ, ಅದನ್ನು ತಾವೇ ನೋಡಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:–** ಮಾನ್ಯ ಸಿ.ಎಂ.ಇಬ್ರಾಹಿಂರವರೆ ಮತ್ತು ಮಾನ್ಯ ಯು.ಬಿ.ವೆಂಕಟೇಶ್‌ರವರೆ ತಾವು ಕುಳಿತುಕೊಳ್ಳಿ. ಇವತ್ತು ಸರ್ಕಾರ ಮತ್ತು ಜಾತ್ಯಾತೀತ ಜನತಾ ದಳ ಮುಖಂಡರ ಜೊತೆಯಲ್ಲಿ ಚರ್ಚೆಯಾಗಿದೆ. ಆ ಚರ್ಚೆಯಲ್ಲಿ ಸರ್ಕಾರ ಎಲ್ಲಾ ರೀತಿಯಿಂದ ತನಿಖೆಯನ್ನು ಮಾಡುವುದಕ್ಕೆ ತಯಾರಿದ್ದೇವೆಂದು ಹೇಳಿದ್ದಾರೆ. ಅದಕ್ಕೆ ಸದನ ಸಮಿತಿ ಮಾಡಿ ಎಂದಾಗ, ಸರ್ಕಾರ ಸದನ ಸಮಿತಿ ಮಾಡುವುದಕ್ಕೆ ಒಪ್ಪಿಕೊಳ್ಳುವುದಿಲ್ಲ. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ವಿಚಾರಗಳನ್ನು ಚರ್ಚೆ ಮಾಡಿದಾಗ, ಆ ಚರ್ಚೆ ಮಾಡಿದಂತಹ ವಿಷಯವನ್ನು ನಮ್ಮ ಆರೋಗ್ಯ ಸಚಿವರು ಸದನಕ್ಕೆ ತಿಳಿಸಿದರೆ ಸೂಕ್ತವೆಂದು ನನಗೆ ಎನಿಸುತ್ತದೆ. ಮಾನ್ಯ ಸಚಿವರು ಮತ್ತೊಂದು ಬಾರಿ ಏನು ಹೇಳುತ್ತಾರೆ ಅದನ್ನು ಹೇಳಲಿ. ನಾನು ಆಮೇಲೆ ತೀರ್ಮಾನ ಮಾಡುತ್ತೇನೆ.

**ಡಾ॥ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಇವತ್ತು 2020-21ರಲ್ಲಿ ನರ್ಸಿಂಗ್ ಕಾಲೇಜುಗಳಿಗೆ ಪರವಾನಿಗೆ ಕೊಡುತ್ತಿರುವುದು ಇದು ಮೊದಲನೆಯ ವರ್ಷವಲ್ಲ. ನಾನು ಈಗಾಗಲೇ ಹೇಳಿದಂತೆ, ಅನೇಕ ವರ್ಷಗಳಿಂದ ಕರ್ನಾಟಕ ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ವಲಯಕ್ಕೆ ಬಹಳಷ್ಟು ಅವಕಾಶಗಳನ್ನು ಕೊಟ್ಟಿದೆ. ಅದಕ್ಕೋಸ್ಕರ ಇಡೀ ದೇಶದಲ್ಲಿ ನಮ್ಮ ಶಿಕ್ಷಣ ಸಂಸ್ಥೆಗಳು ಶಿಕ್ಷಣ ವಲಯದಲ್ಲಿ ಇಷ್ಟೊಂದು ಪ್ರಗತಿಯಾಗಿದೆ ಎಂದರೆ, ಖಾಸಗಿ ವಲಯದವರು ಸರ್ಕಾರದ ಜೊತೆ ಕೈ ಜೋಡಿಸಿರುವುದೇ ಕಾರಣ. ಕಳೆದ ಮೂರು ವರ್ಷಗಳಿಂದ ಯಾವುದೇ ನರ್ಸಿಂಗ್ ಕಾಲೇಜುಗಳು ಕೂಡ ತಲೆ ಎತ್ತಿರಲಿಲ್ಲ. ಕಾರಣವೇನೆಂದರೆ, 2014–15ರಲ್ಲಿ 'ಇಂಡಿಯನ್ ನರ್ಸಿಂಗ್ ಕೌನ್ಸಿಲ್' ನವರು ಯಾವುದೇ ಕಾರಣಕ್ಕೂ ಕೂಡ ಜಿ.ಎನ್.ಎಂ., ಸ್ಕೂಲ್‌ಗಳಿಗೆ ಪರವಾನಿಗೆಯನ್ನು ಕೊಡಬಾರದು ಎಂದು ಆದೇಶ ಮಾಡಿದ್ದಾರೆ. ಅದಾದ ನಂತರ, ಜಿ.ಎನ್.ಎಂ., ಸ್ಕೂಲ್ ಅಂದರೆ ತಮಗೆ ಗೊತ್ತಿದೆ, ಈಗ ಯಾರೇ ಆರ್ಟ್ಸ್ ಮಾಡಿರಲಿ ಮತ್ತು ಬೇರೆ ಯಾವುದೇ ಹಿನ್ನೆಲೆ ಇರಲಿ ಅಂತಹವರು ಕೂಡ ನರ್ಸಿಂಗ್ ಅನ್ನು ಮಾಡುವುದಕ್ಕೆ ಅವಕಾಶವಿತ್ತು. ಹಾಗಾಗಿ, 'ಇಂಡಿಯನ್ ನರ್ಸಿಂಗ್ ಕೌನ್ಸಿಲ್' ನವರು ಏನು ಮಾಡಿದರು ಎಂದರೆ, ಇನ್ನು ಮುಂದೆ ಬಿ.ಎಸ್ಸಿ., ನರ್ಸಿಂಗ್‌ಗೆ ಮಾತ್ರ ಅವಕಾಶವೆಂದು ಆದೇಶ ಮಾಡಿದರು. ಹಾಗಾಗಿ, ರಾಜ್ಯದಲ್ಲಿ ಯಾರ್‍ಯಾರು ಜಿ.ಎನ್.ಎಂ., ಶಾಲೆಗಳನ್ನು ನಡೆಸುತ್ತಿದ್ದರು ಅವರೆಲ್ಲರೂ ಕೂಡ ಬಿ.ಎಸ್ಸಿ., ನರ್ಸಿಂಗ್ ಅನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಡೆಸುತ್ತೇವೆ ನಮಗೆ ಪರವಾನಿಗೆ ನೀಡಿ ಎಂದು ಅರ್ಜಿ ಹಾಕಿಕೊಂಡರು. ಈಗ 600ಕ್ಕೂ ಹೆಚ್ಚು ನರ್ಸಿಂಗ್ ಕಾಲೇಜುಗಳು ಹೇಗೆ ಸ್ಥಾಪನೆಯಾಗಿವೆ? ಕಳೆದ ಎರಡು ವರ್ಷಗಳಲ್ಲಿ ನಮ್ಮ ಸರ್ಕಾರದಿಂದ ಅವುಗಳಿಗೆ ಅನುಮತಿ ಕೊಟ್ಟಿದ್ದೇವೆಯೇ? 2002ನೇ ಇಸವಿಯಲ್ಲಿ ಸುಮಾರು 300ಕ್ಕೂ ಹೆಚ್ಚು ಸಂಸ್ಥೆಗಳಿಗೆ ಅನುಮತಿಯನ್ನು ನೀಡಿದ್ದಾರೆ. ಆದರೆ, ಈಗ ನಾವು ಅದನ್ನು ಮೂರು ಹಂತಗಳಲ್ಲಿ ಮಾಡುತ್ತೇವೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಒಂದು Autonomous Institution. It is the largest University, biggest University in the entire country. ಈ ವಿಶ್ವವಿದ್ಯಾಲಯದಲ್ಲಿ ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳು ಓದಿಕೊಂಡು ವ್ಯಾಸಂಗ ಮಾಡುತ್ತಿದ್ದಾರೆ. ಈಗ ಎಲ್ಲಾ ಕಾಲೇಜುಗಳಿಗೂ ಕೂಡ affiliation ಕೊಡುವುದು ಆರ್.ಜಿ.ಹೆಚ್.ಎಸ್., ಅಲ್ಲೂ ಕೂಡ ನಾವು ಮೂರು ಹಂತಗಳಲ್ಲಿ ಅಂದರೆ, ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್. ಈಗ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಇರುವವರು ಯಾರು ಎಂದರೆ, ಎರಡು-ಮೂರು ಪದವಿಗಳನ್ನು ಪಡೆದಿರುವಂತಹ ವೈದ್ಯರುಗಳು. Gynecologists, Surgeons and Professors ಒಬ್ಬೊಬ್ಬರು ಹತ್ತು-ಹದಿನೈದು ವರ್ಷಗಳ ಕಾಲ ಕೆಲಸ ಮಾಡಿ ಅನುಭವವಿರುವಂತಹ ಪ್ರಾಧ್ಯಾಪಕರುಗಳು. ಅವರ ಜೊತೆಗೆ ಸೆನೆಟ್ ಸದಸ್ಯರು ಇದ್ದಾರೆ. ಸೆನೆಟ್ ಸದಸ್ಯರಾಗುವುದಕ್ಕೆ ಎರಡೂ ಮನೆಯ ಸದಸ್ಯರಿಗೆ ಅವಕಾಶವಿದೆ. ತಾವು ಕೂಡ ಸದಸ್ಯರನ್ನು ನೇಮಕ ಮಾಡಿದ್ದೀರಿ. ನಮ್ಮ ಗೌರವಾನ್ವಿತ ಎನ್.ರವಿಕುಮಾರ್‌ರವರು ಸಹ ಒಬ್ಬ ಸೆನೆಟ್ ಸದಸ್ಯರು. ವಿಧಾನಸಭೆಯಿಂದ ಕೂಡ ಸೆನೆಟ್ ಸದಸ್ಯರು ಇರುತ್ತಾರೆ. ಮೊದಲನೆ ತಂಡ ಸೆನೆಟ್ ಸದಸ್ಯರು ಮತ್ತು ಅಕಾಡೆಮಿಕ್ ಕೌನ್ಸಿಲ್‌ನವರು ಸ್ಥಳ ವೀಕ್ಷಣೆ ಮಾಡುತ್ತಾರೆ. ಕಾಲೇಜಿನಲ್ಲಿ ಇರಬೇಕಾದಂತಹ ಮೂಲಭೂತ ಸೌಕರ್ಯಗಳು ಸರಿಯಾಗಿವೆಯೇ ಇಲ್ಲವೇ? ಮತ್ತು ಸಿಬ್ಬಂದಿ ವರ್ಗದವರು ಇದ್ದಾರೆಯೇ ಇಲ್ಲವೇ? ಇವೆಲ್ಲವನ್ನು ಪರಿಶೀಲನೆ ಮಾಡಿ, ಒಂದು ಟಿಪ್ಪಣಿ ಮಾಡಿ, ವರದಿ ಸಲ್ಲಿಸುತ್ತಾರೆ. ಅದಾದ ಮೇಲೆ, ವಿಶ್ವವಿದ್ಯಾಲಯದಲ್ಲಿ ಒಂದು ಸಿಂಡಿಕೇಟ್ ಸಮಿತಿ ಇರುತ್ತದೆ. Syndicate is the highest governing body of R.G.H.S., ಮತ್ತೆ ಆ ಸಮಿತಿಯಲ್ಲೂ ಕೂಡ ಇವರು ಕಳುಹಿಸಿರುವಂತಹ ಅರ್ಜಿಗಳನ್ನು ಪುನರ್‌ಪರಿಶೀಲನೆ ಮಾಡುತ್ತಾರೆ. ಪರಿಶೀಲನೆ ಮಾಡಿ, ಅವರು ಕೂಡ ಈ ಬಾರಿ ಸ್ಥಳ ವೀಕ್ಷಣೆ ಮಾಡಿದ್ದಾರೆ. ಆ ಸ್ಥಳ ವೀಕ್ಷಣೆ ಮಾಡಿದ ಮೇಲೆ ಆ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಇಷ್ಟು ವರ್ಷಗಳಲ್ಲಿ High Power Committee. ಇರಲಿಲ್ಲ. ನಾನು ಸಚಿವನಾದ ಮೇಲೆ, ಸರ್ಕಾರದ ಹಂತದಲ್ಲಿ ನಮ್ಮ ಪ್ರಧಾನ ಕಾರ್ಯದರ್ಶಿಗಳ ನೇತೃತ್ವದಲ್ಲಿ High Power Committee ರಚನೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮಾಡಿದ್ದೆವು. ಏಕೆಂದರೆ, ವಿಶ್ವವಿದ್ಯಾಲಯದವರು ಕೊಟ್ಟಿರುವುದನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳುವುದು ಬೇಡ ಮತ್ತು ಅವರು ಕೊಟ್ಟಿರುವುದರಲ್ಲಿ ಸತ್ಯ ಇರುತ್ತದೋ ಇಲ್ಲವೋ ಎಂದು. ಏಕೆಂದರೆ, ನಾನು ಈ ಹಿಂದೆ ನೋಡಿದ್ದೇನೆ ಮತ್ತು ವೈದ್ಯಕೀಯ ಹಿನ್ನೆಲೆಯಿಂದ ಬಂದಿದ್ದೇನೆ. ಈ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ಹೇಗೆ ನಡೆಯುತ್ತಿದೆ ಎಂದು ನನಗೂ ಸ್ವಲ್ಪ ಅದರ ಅನುಭವವಿದೆ. ನನಗೆ ಈ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣವನ್ನು ಸರಿಯಾದ ಹಾದಿಗೆ ತರಬೇಕೆಂಬ ಒಂದು ಬದ್ಧತೆ ಇತ್ತು. ಈ ಹಿಂದೆ ಅನುಭವ ಇಲ್ಲದೇ ಇರುವಂತಹವರು ಮಂತ್ರಿಗಳಾಗಿ, ಸಂತೆ ಸಂತೆಯಲ್ಲಿ ನರ್ಸಿಂಗ್ ಕಾಲೇಜುಗಳಿಗೆ ಅವಕಾಶ ಕೊಟ್ಟಿರುವುದರಿಂದ ಇವತ್ತು ನಾವು ಅದರ ಪಾಪ ಕರ್ಮಗಳನ್ನು ಅನುಭವಿಸುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, ಕೇರಳದವರು ಮನೆಯಲ್ಲಿ ಕುಳಿತುಕೊಂಡು ಬರೆಯುತ್ತಾರೆ ಎಂದು, ಹೌದು ಅದು ನಿಜ. ಆಗ ಏಕೆ ಜಂಟಿ ಸದನ ಸಮಿತಿಯ ರಚನೆಗೆ ಕೇಳಲಿಲ್ಲ ಮತ್ತು ತನಿಖೆಗೆ ಕೂಡ ಕೇಳಲಿಲ್ಲ. ಆಗ 300 ಸಂಸ್ಥೆಗಳಿಗೆ ಹೇಗೆ ಅನುಮತಿ ಕೊಟ್ಟರು? ನಾವು ಪೇಪರ್‌ಗಳಲ್ಲಿ insertion ಕೊಡುತ್ತಿವೆಯಲ್ಲಾ ಆ ರೀತಿಯಲ್ಲಿ 2002ರಲ್ಲಿ ನರ್ಸಿಂಗ್ ಸಂಸ್ಥೆಗಳು ಸ್ಥಾಪನೆಯಾಗಿದ್ದವು. ಹಾಗಾಗಿ, ಮಾತನಾಡುವುದಕ್ಕೆ ಮುಂಚೆ ನಮ್ಮ ಆಡಳಿತದಲ್ಲಿ ಪರಿಶೀಲನೆ ಮಾಡಿರುವಂತಹ ವಿಧಿ ವಿಧಾನದಲ್ಲಿ ಎಲ್ಲಿ ಲೋಪವಿದೆ ಎಂದು ತೋರಿಸಬೇಕಲ್ಲವೇ? ನಮ್ಮ ಇಲಾಖೆಯಾಗಲಿ ಮತ್ತು ಸರ್ಕಾರವಾಗಲಿ ಎಲ್ಲಿ ಎಡವಿದೆ ಎಂದು ತೋರಿಸಬೇಕಲ್ಲವೇ? ಭ್ರಷಾಚಾರ ಎಂದು ಹೇಳುತ್ತಾರೆ. ಹಾಗಾದರೆ ಭ್ರಷ್ಟಾಚಾರ ಎಲ್ಲಿ ಆಗಿದೆ. ನಾವು ತಾಂತ್ರಿಕವಾಗಿ ಎಲ್ಲಿ ತಪ್ಪು ಮಾಡಿದ್ದೇವೆ? ಪ್ರಧಾನ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚನೆ ಮಾಡಿರುವಂತಹ High Power Committee ಯ ಬಗ್ಗೆ ನೀವು ಯಾರು ಹೇಳಿರಲಿಲ್ಲ. ಸರ್ಕಾರವೇ ಅದರ ಉದ್ದೇಶ ಇಟ್ಟುಕೊಂಡು ರಚನೆ ಮಾಡಿರುವಂಥದ್ದು. ಅದನ್ನು ರಚನೆ ಮಾಡಿದ ಮೇಲೆ ಅವರು ಶಿಫಾರಸ್ಸು ಮಾಡಿರುವಂತಹ ಎಲ್ಲಾ ಸಂಸ್ಥೆಗಳಿಗೂ ಕೂಡ ಅವಕಾಶ ನೀಡಿಲ್ಲ. ಅದರಲ್ಲಿ ಸುಮಾರು 15 ಸಂಸ್ಥೆಗಳನ್ನು ಕಡಿಮೆ ಮಾಡಿದ್ದೇವೆ. ನಾವು ಅವರು ಶಿಫಾರಸ್ಸು ಮಾಡಿರುವುದಕ್ಕಿಂತ ಹೆಚ್ಚು ಮಾಡಿದ್ದರೆ, ಸರ್ಕಾರ ತಪ್ಪು ಮಾಡಿದೆ ಎಂದು ತಾವು ಹೇಳಬಹುದು. ವಿಶ್ವವಿದ್ಯಾಲಯದವರು ಮೂರು ಹಂತಗಳಲ್ಲಿ ಪರಿಶೀಲನೆ ಮಾಡಿ ಕಳುಹಿಸಿರುವುದನ್ನು ಪುನರ್ ಪರಿಶೀಲಿಸಿ ಅಂತಿಮವಾಗಿ ನಮ್ಮ High Power Committee ಯವರು recommend ಮಾಡಿದ್ದಾರಲ್ಲ, ಅಂತಹ ಯಾವುದಾದರೂ ಸಂಸ್ಥೆಗಳಲ್ಲಿ ಲೋಪದೋಷಗಳು ಇದ್ದರೂ ಕೂಡ, ಅಂತಹವುಗಳನ್ನು ನಿರ್ದಿಷ್ಟವಾಗಿ ಹೇಳಿದರೆ ಅವರ ಮೇಲೆ ಕ್ರಮಕೈಗೊಳ್ಳುತ್ತೇವೆ. ಆ ರೀತಿ ಯಾರು ತಪ್ಪು ವರದಿಯನ್ನು ಕೊಟ್ಟಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುತ್ತೇನೆಂದು ಸದನದಲ್ಲಿ ಹೇಳಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(519) 11.30 19.03.2021 ಎಲ್‌ಎಲ್/ಜಿಆರ್**

**ಡಾ: ಕೆ. ಸುಧಾಕರ್(ಮುಂದು)**

ಇದರಲ್ಲಿ ಎಲ್ಲಿ ಲೋಪವಾಗಿದೆ ಎನ್ನುವ ಬಗ್ಗೆ ಯಾರು ಹೇಳುತ್ತಿಲ್ಲ. ಆದರೆ, ನಮ್ಮ ಮುಂದೆ ಪ್ರಶ್ನೆ ಇರುವಂಥದ್ದು, ಈ ರಾಜ್ಯಕ್ಕೆ ಮೆಡಿಕಲ್ ಕಾಲೇಜುಗಳು ಬೇಕೋ ಅಥವಾ ಬೇಡವೋ; ನರ್ಸಿಂಗ್ ಕಾಲೇಜುಗಳು ಮಾಡಬೇಕೋ ಅಥವಾ ಬೇಡವೋ ಮತ್ತು ಹೆಚ್ಚಿನ ನರ್ಸಿಂಗ್ ವಿದ್ಯಾರ್ಥಿಗಳು ಈ ರಾಜ್ಯದಲ್ಲಿ ಇರಬೇಕೇ ಅಥವಾ ಬೇಡವೇ ಎನ್ನುವುದಾಗಿದೆ. ಇವೊತ್ತಿನ ದಿವಸ ಇಡೀ ದೇಶದಲ್ಲಿಯೇ ನಮ್ಮ ರಾಜ್ಯದಿಂದ ಹೊರದೇಶಗಳಿಗೆ ಅನೇಕ ಮಹಿಳೆಯರು ನರ್ಸ್‌ಗಳಾಗಿ ಹೋಗಿ ಉತ್ತಮ ಜೀವನವನ್ನು ನಡೆಸುತ್ತಿರುವಂತಹವರು ಅನೇಕರಿದ್ದಾರೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅವರೆಲ್ಲರೂ ಕೇರಳ ರಾಜ್ಯದವರಾಗಿದ್ದಾರೆ.

**ಡಾ: ಕೆ. ಸುಧಾಕರ್(ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಅವರಲ್ಲಿ ಕೇರಳ ರಾಜ್ಯದವರು ಮಾತ್ರವಲ್ಲದೇ, ನಮ್ಮ ರಾಜ್ಯದ ಕೊಡಗು ಜಿಲ್ಲೆಯವರು ಹಾಗೂ ಉತ್ತರ ಕರ್ನಾಟಕ ಭಾಗದ ಅನೇಕ ಮಹಿಳೆಯರು ಇದ್ದಾರೆ. ನಾನು ಇದರಲ್ಲಿ ವೈಯಕ್ತಿಕವಾಗಿ ಯಾರ ಬಗ್ಗೆಯೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇಂತಹ ಸಂಸ್ಥೆಗಳಲ್ಲಿ ಎರಡೂ ಮನೆ(ಸದನ)ಗಳಲ್ಲಿರುವಂತಹ ಗೌರವಾನ್ವಿತ ಸದಸ್ಯರ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಇರುವುದಿಲ್ಲವೇ? ಅವರು ಇಂತಹ ಸಂಸ್ಥೆಗಳನ್ನು ಪ್ರಾರಂಭ ಮಾಡಬಾರದೆಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. To run an institution, it is not illegal. Legitimate ಆಗಿ ಪ್ರತಿಯೊಬ್ಬರೂ ಸಹ ಶಿಕ್ಷಣ ಸಂಸ್ಥೆಯನ್ನು ಕಟ್ಟುವುದಕ್ಕೆ ಅವಕಾಶವಿದೆ. ಇದು ಒಂದು ವಿದ್ಯಾ ಸೇವೆಯಾಗಿದೆ. ಹಾಗಾಗಿ, ಇವೊತ್ತಿನ ದಿವಸ ನಾವು ಹೊಸ ಶಿಕ್ಷಣ ಸಂಸ್ಥೆಗಳಿಗೆ ಕೊಟ್ಟಿರುವಂತಹ ಪರವಾನಗಿಯಲ್ಲಿ ಐದಾರು ಗೌರವಾನ್ವಿತ ಸದಸ್ಯರುಗಳ ಶಿಕ್ಷಣ ಸಂಸ್ಥೆಗಳು ಸಹ ಇರುತ್ತವೆ. ಅದರಲ್ಲಿಯೂ ಶೇಕಡ 90 ರಷ್ಟು ಸದಸ್ಯರು ಪ್ರತಿಪಕ್ಷದವರೇ ಆಗಿದ್ದಾರೆ. ಅವರುಗಳ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹಾಗಾಗಿ, ನಾವು ಈ ವಿಷಯದಲ್ಲಿ ಏನು ತಪ್ಪು ಮಾಡಿದ್ದೇವೆ ಅಥವಾ ಎಲ್ಲಿ ಲೋಪ ಆಗಿದೆ ಎಂಬ ಬಗ್ಗೆ ಯಾರೂ ಹೇಳುತ್ತಿಲ್ಲ. ಆದಾಗ್ಯೂ, ಇದರಲ್ಲಿ ಏನು ಲೋಪ ಆಗಿಲ್ಲವೆಂದು ಗೊತ್ತಿದ್ದರೂ ಸಹ ನಾನು ಸ್ವಯಂಪ್ರೇರಿತವಾಗಿ ನಿನ್ನೆಯ ದಿವಸ ಈ ಸದನದಲ್ಲಿ... ಏಕೆಂದರೆ, ಒಂದು ವ್ಯವಸ್ಥೆಯನ್ನು ಸರಿ ದಾರಿಗೆ ತರಬೇಕು. ಇದರಲ್ಲಿ ಈ ಹಿಂದೆ ಆಗಿರುವಂತಹ ಅಕ್ರಮಗಳನ್ನು ಈಗಲಾದರೂ ಸರಿಮಾಡಬೇಕು. ಇವು ಕೇವಲ 40–50 ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಅಲ್ಲ. ಸುಮಾರು 600–700 ವೈದ್ಯಕೀಯ ಶಿಕ್ಷಣ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಏನಿವೆ, ಅಷ್ಟು ಸಂಸ್ಥೆಗಳ ಮೇಲೆ ತನಿಖೆ ಮಾಡಿಸಿ, ಅರ್ಹ ಸಂಸ್ಥೆಗಳು ಮಾತ್ರ ಇನ್ನು ಮುಂದೆ ಕಾರ್ಯ ಮಾಡಬೇಕೆಂದು ನಾನು ಈಗಾಗಲೇ ಹೇಳಿದ್ದೇನೆ. ಜೊತೆಗೆ, ಗುಣಮಟ್ಟ ಕಾಯ್ದುಕೊಂಡಿರುವಂತಹ ಸಂಸ್ಥೆಗಳು ಮಾತ್ರ ಇನ್ನು ಮುಂದೆ ನಮ್ಮ ರಾಜ್ಯದಲ್ಲಿರಬೇಕು. ಯಾವುದು ಕಳಪೆ ಸಂಸ್ಥೆಗಳು ಅಂದರೆ, ಶಿಕ್ಷಣ ಸಂಸ್ಥೆಗಳಿಗೆ ಯಾವ ಗುಣಮಟ್ಟ ಇರಬೇಕಾಗಿತ್ತು ಅದು ಇಲ್ಲದೇ ಇರುವಂತಹ ಸಂಸ್ಥೆಗಳ ಪರವಾನಗಿಯನ್ನು ಶಾಶ್ವತವಾಗಿ ರದ್ದು ಮಾಡಬೇಕೆಂದು ನಾನು ತನಿಖೆ ಆದ ಮೇಲೆ ಆದೇಶ ಮಾಡುತ್ತೇನೆಂದು ಸಹ ನಾನು ಈಗಾಗಲೇ ಹೇಳಿದ್ದೇನೆ.

ಈ ನರ್ಸಿಂಗ್ ಸಂಸ್ಥೆಗಳು ಯಾವ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು ಮತ್ತು ಅವರ ಮೇಲೆ ನಿಗಾ ಇಡಬೇಕೆಂಬ ಬಗ್ಗೆ ಆದೇಶ ಪತ್ರವನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಿಗೆ ಕಳುಹಿಸಿದ್ದೇನೆ. ಅದರಂತೆ, ಈ ಪತ್ರವನ್ನು ತಮ್ಮ ಮೂಲಕ ನಾನು ಎಲ್ಲಾ ಮಾನ್ಯ ಸದಸ್ಯರಿಗೂ ಸಹ ಕಳುಹಿಸಿಕೊಡುತ್ತೇನೆ. ಅದರ ಮೊದಲನೆ ಅಂಶದಲ್ಲಿ ನಾನು, "ಕರ್ನಾಟಕದಲ್ಲಿ ಪ್ಯಾರಾ ಮೆಡಿಕಲ್ ನರ್ಸಿಂಗ್‌ನ ಎಲ್ಲಾ ಶಾಲೆಗಳು ಸಾವಿರಕ್ಕೂ ಹೆಚ್ಚು ಇದ್ದು, ಗುಣಮಟ್ಟ ಶಿಕ್ಷಣ ನೀಡುತ್ತಿಲ್ಲವೆಂದು ನಿಯಮಾವಳಿ ಅನುಸಾರ ಅಗತ್ಯ ಮೂಲಭೂತ ಸೌಕರ್ಯ ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿಗಳನ್ನು ಸಹ ಹೊಂದಿರುವುದಿಲ್ಲವೆಂದು ದೂರುಗಳಿರುವುದು ವಿಷಾದನೀಯ ಸಂಗತಿಯಾಗಿರುತ್ತದೆ. ಗುಣಮಟ್ಟದ ಶಿಕ್ಷಣ ನೀಡುವ ಮುಖೇನ ನುರಿತ ಆರೋಗ್ಯ ಸೇವಕರನ್ನು ಸಮಾಜಕ್ಕೆ ನೀಡುವುದು ಇಲಾಖೆಯ ಕರ್ತವ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳನ್ನು ಅಥವಾ ಲೋಪಗಳನ್ನು ತಕ್ಷಣವೇ ಸರಿಪಡಿಸಲು ಕ್ರಮ ವಹಿಸಬೇಕಾಗಿರುತ್ತದೆ.

" 1) ಎಲ್ಲಾ ವಿದ್ಯಾ ಸಂಸ್ಥೆಗಳನ್ನು ಜಿ.ಪಿ.ಎಸ್. ಮುಖೇನ ಮಾರ್ಕ್ ಮಾಡುವುದು."

ಈ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು, "ಅಲ್ಲಿ ಸಂಸ್ಥೆ/ಕಟ್ಟಡ ಇದೆಯೇ ಅಥವಾ ಇಲ್ಲವೇ" ಎಂದು ಹೇಳಿದ್ದಾರೆ. ಹಾಗಾಗಿ, ಅಂತಹ ಶಿಕ್ಷಣ ಸಂಸ್ಥೆಗಳನ್ನು ಜಿ.ಪಿ.ಎಸ್., ಮಾಡಿದರೆ ಯಾರು ಕೂಡ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದರಂತೆ, ಜಿ.ಪಿ.ಎಸ್., ಇಲ್ಲದೇ ಇರುವಂತಹ ಸಂಸ್ಥೆಗಳ ಪರವಾನಗಿ ಕೂಡ ಆಟೋಮ್ಯಾಟಿಕ್ ಆಗಿ ರದ್ದು ಆಗುತ್ತದೆ.

"2) ಎಲ್ಲಾ ಕಾಲೇಜುಗಳಲ್ಲಿಯೂ ಕೂಡ ದಿನಪ್ರತಿ Aadhar based biometric ಆಧಾರಿತ ಹಾಜರಾತಿ ಪದ್ಧತಿಯನ್ನು ತಕ್ಷಣ ಜಾರಿಗೊಳಿಸಬೇಕು."

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೌನ್ಸಿಲ್ ವತಿಯಿಂದ ನಡೆಸುವ ಎಲ್ಲಾ ಪರೀಕ್ಷೆಗಳಿಗೂ Aadhar enabled biometric login system ವ್ಯವಸ್ಥೆಯನ್ನು ಜಾರಿಗೊಳಿಸಬೇಕೆಂದು ದಿನಾಂಕ:04.03.2020ರಂದು ನಾನು ನನ್ನ ಪತ್ರದಲ್ಲಿ ತಿಳಿಸಿರುತ್ತೇನೆ. ಅದಕ್ಕೆ ದಿನಾಂಕ:02.06.2020ರಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿಗಳು ಕಳುಹಿಸಿಕೊಟ್ಟಿದ್ದಾರೆ.

> "3) ಅಧಿಕಾರಿಗಳು ಹಾಗೂ ತಂಡದ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳಲು ಅಗತ್ಯ ನಿಯಮ ರೂಪಿಸುವುದು."

ಅಂದರೆ, ಇದರಲ್ಲಿ ಸಮಿತಿ ವತಿಯಿಂದ ತಪಾಸಣೆಗೆ ಹೋಗಿರುವಂತಹವರು ತಪ್ಪು ಮಾಹಿತಿ ನೀಡಿದ್ದರೆ ಅವರ ವಿರುದ್ಧ ಕೂಡ ಅಗತ್ಯ ಕ್ರಮ ರೂಪಿಸುವುದು ಎಂದು ಹೇಳಿರುತ್ತೇನೆ.

> "4) ಬೋಧಕ ಸಿಬ್ಬಂದಿಗಳನ್ನು ಆಧಾರ್ ಆಧಾರಿತವಾಗಿ ಗುರುತು ಮಾಡುವುದು."

ಎಲ್ಲಾ ಪರೀಕ್ಷೆಗಳನ್ನು ಅಂದರೆ, ಈ ಹಿಂದೆ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ಎಲ್ಲಿಯೋ ಕುಳಿತುಕೊಂಡು ಬರೆಯುತ್ತಿದ್ದರು. ಇನ್ನೂ ಕೆಲವರು ಪರೀಕ್ಷೆಗಳನ್ನೇ ಬರೆಯುತ್ತಿರಲಿಲ್ಲ. ಅಂತಹ ವಿದ್ಯಾರ್ಥಿಗಳಿಗೆ ನಮ್ಮ ರಾಜ್ಯದಿಂದ ಬೋಗಸ್ ಸರ್ಟಿಫಿಕೇಟ್‌ಗಳನ್ನು ಸಹ ಕೊಡಲಾಗಿರುತ್ತದೆ. ಆ ಸಂದರ್ಭದಲ್ಲಿ ಪಾಪ! ಯಾರಿಗೂ ಸದನ ಸಮಿತಿ ಬೇಕಾಗಿರಲಿಲ್ಲ. ಈಗ ನಾವು ಇವುಗಳನ್ನು ಬಿಗಿ ಮಾಡುವುದಕ್ಕೆ ಬಂದಿದ್ದೇವೆ, ಈಗ ತನಿಖೆ ಮಾಡಬೇಕಾಗಿದೆ.

> "5) ಎಲ್ಲಾ ಪರೀಕ್ಷೆಗಳನ್ನು ಸಿ.ಸಿ.ಟಿ.ವಿ., ಅಳವಡಿಸಿರುವ ಪರೀಕ್ಷಾ ಕೇಂದ್ರಗಳಲ್ಲಿಯೇ ಸಾಧ್ಯವಾದಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಗಳು ನಡೆಸುವ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲು ಕ್ರಮ ವಹಿಸುವುದು."

ಅಂದರೆ, ಕೆಲವು ಶಿಕ್ಷಣ ಸಂಸ್ಥೆಗಳ ಪರೀಕ್ಷಾ ಕೇಂದ್ರಗಳಲ್ಲಿ ಏನಾದರೂ ನಕಲು ಮಾಡಿಸುತ್ತಿದ್ದರೆ ಎಲ್ಲವೂ ಕೂಡ ಸಿ.ಸಿ.ಟಿ.ವಿ., ಕ್ಯಾಮರಾಗಳಲ್ಲಿ ನೋಡಬೇಕೆಂದು ಆದೇಶ ಮಾಡಲಾಗಿದೆ.

> "6) ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿ ವರದಿಗಳನ್ನು ತುಂಬಾ ಜಾಳು ಆಗಿ ಮಾಡಲಾಗುತ್ತಿದೆಯೆಂದು ಮತ್ತು ಪಕ್ಷಪಾತಿ ಆಗಿರುತ್ತದೆಯೆಂಬ ಬಗ್ಗೆ ದೂರುಗಳು ಇರುತ್ತವೆ. ಈ ಹಿನ್ನೆಲೆಯಲ್ಲಿ ಲೋಕಲ್ ಇನ್ಸ್‌ಪೆಕ್ಷನ್ ಕಮಿಟಿ ಬಗ್ಗೆ ಪರಮಾರ್ಶಿಸಬೇಕಾಗಿದ್ದು, ಹಿರಿಯ ವೈದ್ಯಾಧಿಕಾರಿ/ಆಡಳಿತಾಧಿಕಾರಿಯೊಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸಲು ಇಂಜಿನಿಯರಿಂಗ್ ಹಾಗೂ ವಿಷಯ ತಜ್ಞರನ್ನು ಒಳಗೊಂಡ ತಂಡ ರಚಿಸಲು ತಮ್ಮ ಮೂಲಕ ಎಲ್.ಐ.ಸಿ.,ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

accountability ತರಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು. ಈ ರೀತಿ ರಚಿಸಿದ ತರುವಾಯ ತಪ್ಪು ಮಾಹಿತಿ ನೀಡಿರುವ ಹಾಲಿ ಇರುವ ಎಲ್ಲಾ ನರ್ಸಿಂಗ್ ಶಾಲೆ ಮತ್ತು ಕಾಲೇಜು, ಪ್ಯಾರಾ ಮೆಡಿಕಲ್ ಸಂಸ್ಥೆಗಳು, ಫಿಸಿಯೋಥೆರಪಿ ಸಂಸ್ಥೆಗಳು, ಅಲೈಡ್ ಹೆಲ್ತ್ ಸೈನ್ಸ್ ಸಂಸ್ಥೆಗಳು, ಇದರ ಮೂಲಭೂತ ಸೌಕರ್ಯಗಳು ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿಗಳ ಕುರಿತಾದ ತಪಾಸಣೆಗಳನ್ನು ನಡೆಸಲು ಚಾಲ್ತಿ ಮಾರ್ಗಸೂಚಿಗಳ ಅನುಸಾರ ಅಗತ್ಯ ಚೆಕ್‌ಲಿಸ್ಟ್ ಸಿದ್ಧಪಡಿಸುವುದು ಹಾಗೂ ಮೇಲ್ಕಾಣಿಸಿದಂತೆ ಪರಿಷ್ಕೃತ ನಿಯಮಗಳನುಸಾರ ಎಲ್.ಐ.ಸಿ., ತಂಡಗಳನ್ನು ರಚಿಸಿ ರಾಜ್ಯದಲ್ಲಿನ ಮೇಲ್ಕಂಡ ಎಲ್ಲಾ ರೀತಿಯ ಸಂಸ್ಥೆಗಳನ್ನು ತಪಾಸಣೆ ಮಾಡಿ ಫೋಟೋಗಳೊಂದಿಗೆ ವಸ್ತುನಿಷ್ಠ ವರದಿಯನ್ನು ಮುಂದಿನ 3 ತಿಂಗಳ ಒಳಗಾಗಿ ಕ್ರಮಕ್ಕಾಗಿ ಸಲ್ಲಿಸುವುದು."

ಇದನ್ನು ಮಾಡಬೇಕೆಂದು ಯಾರೂ ಸಹ ನನಗೆ ಹೇಳಿರಲಿಲ್ಲ.

"7) ವಿದ್ಯಾರ್ಥಿಗಳಿಂದ ದೂರುಗಳ ಸ್ವೀಕಾರ ಮತ್ತು ಇತ್ಯರ್ಥಕ್ಕಾಗಿ Students Grievance Interactive App ಇದನ್ನು ಕೂಡ ಸಿದ್ಧಪಡಿಸಿ, ವಿದ್ಯಾರ್ಥಿಗಳು ಮತ್ತು ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿಯವರ ನಡುವೆ ಉತ್ತಮ ಸಂವಹನಕ್ಕಾಗಿ ಅನುವು ಮಾಡಿಕೊಡಲು ಕ್ರಮ ವಹಿಸುವುದು.

8) ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಅಡಿಯಲ್ಲಿ ನೊಂದಾವಣಿ ಪ್ರಕ್ರಿಯೆಯನ್ನು ಡಿಜಿಟಲೈಸ್ ಮಾಡುವುದು. ಪೂರ್ಣ ಮಾಹಿತಿಯನ್ನು 'ಡಿಜಿ ಲಾಕರ್'ನಲ್ಲಿ ಅಳವಡಿಸಿ ಅದಕ್ಕೆ ಕ್ರಮ ವಹಿಸುವುದು. ಯಾವುದೇ ಆಫ್‌ಲೈನ್ ರಿಜಿಸ್ಟ್ರೇಷನ್‌ಗೆ ಅವಕಾಶ ಕೊಡಬಾರದು.

9) ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ನರ್ಸಿಂಗ್ ಕೌನ್ಸಿಲ್ ಮತ್ತು ಪ್ಯಾರಾ ಮೆಡಿಕಲ್ ಬೋರ್ಡ್‌ಗಳಿಗೆ ತಕ್ಷಣವೇ ಸ್ವಂತ ಕಟ್ಟಡವನ್ನು ಇಟ್ಟುಕೊಳ್ಳಬೇಕು."

ಈ ಎಲ್ಲಾ ಅಂಶಗಳ ಬಗ್ಗೆ ನನಗೆ ಹೆಚ್ಚಿನ ಅನುಭವ ಇದ್ದುದರಿಂದ, ಇದರ ಹಿನ್ನೆಲೆಯನ್ನು ಅರಿತುಕೊಂಡು ಕಳೆದ ವರ್ಷದ 3ನೇ ತಿಂಗಳಿನಲ್ಲಿ ನಾನೇ ಸ್ವಯಂ ಪ್ರೇರಿತವಾಗಿ ಈಗಿರುವಂತಹ ವ್ಯವಸ್ಥೆಯನ್ನು ಸರಿ ದಾರಿಗೆ ತರಬೇಕು. ಅದರಲ್ಲಿ ನರ್ಸಿಂಗ್ ಇರಬಹುದು ಅಥವಾ ವೈದ್ಯಕೀಯ ಶಿಕ್ಷಣ ಇರಬಹುದು ಅದನ್ನು ಒಂದು ಅಂತರಾಷ್ಟ್ರೀಯ ದರ್ಜೆಗೆ ತರಬೇಕು ಮತ್ತು ಇದರಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು ಅನ್ನುವ ಒಂದೇ ಒಂದು ಕಾರಣಕ್ಕೆ ಇವೊತ್ತಿನ ದಿವಸ ಈ ಎಲ್ಲಾ ಅಮೂಲಾಗ್ರ ಬದಲಾವಣೆಯನ್ನು ತರಬೇಕೆಂದು ಹೇಳಿ ಈಗಾಗಲೇ ಕ್ರಮಗಳನ್ನು ತೆಗೆದುಕೊಂಡಿದ್ದೇನೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇವೊತ್ತಿನ ದಿವಸ ಈ ಸಂಸ್ಥೆಗಳಿಗೆ ಬಹಳ ಪಾರದರ್ಶಕವಾಗಿ ಮತ್ತು ವೈಜ್ಞಾನಿಕವಾಗಿ ಅವಕಾಶ ಕೊಟ್ಟಿದ್ದೇವೆ. ಹಾಗಾಗಿ, ವೈದ್ಯಕೀಯ ಅಥವಾ ನರ್ಸಿಂಗ್ ಸಂಸ್ಥೆಗಳನ್ನು ಪ್ರಾರಂಭ ಮಾಡಬೇಕೋ ಅಥವಾ ಬೇಡವೋ; ಅವುಗಳಿಗೆ ಅನುಮತಿ ಕೊಡಲೇಬೇಕೋ ಅಥವಾ ಕೊಡಬಾರದೋ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದು ಸಹ ಚರ್ಚೆ ಆಗಬೇಕಲ್ಲವೇ? ಒಂದು ವೇಳೆ ಅವುಗಳಿಗೆ ಅನುಮತಿ ಕೊಡಬೇಕು ಎಂದಾದರೆ, ಅವುಗಳಿಗೆ ಯಾವ ಆಧಾರದ ಮೇರೆಗೆ ಅನುಮತಿ ಕೊಡಬೇಕು. ಅವೆಲ್ಲವನ್ನೂ ನಾನು ತಮಗೆ ವಿವರಿಸಿದ್ದೇನೆ. ಈ ಹಿಂದೆ ನಡೆದು ಬಂದಂತಹ ದಾರಿ ಮತ್ತು ಅದಕ್ಕೆ ಇನ್ನಷ್ಟು ಗಟ್ಟಿಯಾದ ಯಾವ ಒಂದು ವ್ಯವಸ್ಥೆ ಮಾಡಬೇಕೆಂಬ ಬಗ್ಗೆ 'ಹೈ ಪವರ್ ಕಮಿಟಿ'ಯನ್ನು ನಮ್ಮ ಸರ್ಕಾರದ ವತಿಯಿಂದ ಮಾಡಿದ್ದೇವೆ. ಹಾಗಾಗಿ, ತಾಂತ್ರಿಕ ಅಂಶಗಳಿಂದ ಯಾವುದಾದರೂ ಲೋಪವಾಗಿದ್ದರೆ, ಅದನ್ನು ಸರ್ಕಾರದ ಗಮನಕ್ಕೆ ತಂದರೆ ಖಂಡಿತವಾಗಿಯೂ ಅದನ್ನು ಬದಲಾಯಿಸುವುದಕ್ಕೆ ನಾವು ತಯಾರಿದ್ದೇವೆ. ನಾವು ನೀವು ಸೇರಿಕೊಂಡು ಈ ವ್ಯವಸ್ಥೆಯನ್ನು ಸರಿ ಮಾಡುವುದಾದರೆ ಅದರಲ್ಲಿ ನಮ್ಮ ತಕರಾರೇನು ಇರುವುದಿಲ್ಲ. ಇದರಲ್ಲಿ ನಮ್ಮದೇನು ego ಇಲ್ಲ ಅಥವಾ ಒಣಪ್ರತಿಷ್ಠೆ ಇರುವುದಿಲ್ಲ.

**(ಮುಂದು)**

**(520) 19.03.2021 11.40 ವೈಎಲ್-ಎಂಡಿ**

**ಡಾ॥ ಕೆ.ಸುಧಾಕರ್(ಮುಂದು):-**

ಕೋವಿಡ್-19 ರೋಗ ಬಂದಂತಹ ಸಂದರ್ಭದಲ್ಲಿ ಹೆಚ್ಚು ವಿದ್ಯಾ ಸಂಸ್ಥೆಗಳು ಬರಬೇಕು, ವೈದ್ಯಕೀಯ ಕ್ಷೇತ್ರದಲ್ಲಿ ಹೆಚ್ಚು ಜನರು ನೇಮಕಗೊಳ್ಳಬೇಕು, ಕರ್ನಾಟಕ ರಾಜ್ಯದ ಸುಮಾರು ಆರೂವರೆ, ಏಳು ಕೋಟಿ ಜನರ ಸೇವೆ ಮಾಡಲು ಆರೋಗ್ಯ ಕ್ಷೇತ್ರದಲ್ಲಿ ಹೆಚ್ಚು ವೈದ್ಯರು / ವೈದ್ಯಕೇತರ ಸಿಬ್ಬಂದಿಗಳು ಇರಬೇಕಲ್ಲವೇ? ಈ ಹಿನ್ನೆಲೆಯಿಂದ ಹೆಚ್ಚು ನರ್ಸಿಂಗ್ ಕಾಲೇಜ್, ಪ್ಯಾರಾ ಮೆಡಿಕಲ್, ಆಯುಷ್ ಸಂಸ್ಥೆಗಳು ಇರಬಹುದು. ಇವತ್ತಿನ ದಿವಸ ಆಯುಷ್ ಸಂಸ್ಥೆಗಳು ಸಹ ಹೆಚ್ಚಾಗಿ ಅಸ್ತಿತ್ವಕ್ಕೆ ಬರುತ್ತಿದೆ. ಇವತ್ತಿನ ದಿವಸ ಬೇರೆ-ಬೇರೆ ರೀತಿಯ ಚಿಕಿತ್ಸೆಗಾಗಿ ಜನರು ಆಯುಷ್ ಸಂಸ್ಥೆಗಳಿಗೆ ಮುಂದೆ ಬರುತ್ತಿದ್ದು, ಅದನ್ನು ಸಹ ಸ್ವೀಕಾರ ಮಾಡುತ್ತಿದ್ದಾರೆ. ಹಾಗಾಗಿ ಮಾನ್ಯ ವಿರೋಧ ಪಕ್ಷದ ಕೆಲವು ಸದಸ್ಯರು ಎತ್ತಿರುವಂಥ ವಿಷಯಕ್ಕೆ ಸಂಪೂರ್ಣವಾದಂಥ, ಸಮಗ್ರವಾದಂಥ ಉತ್ತರವನ್ನು ನೀಡಿದ್ದೇನೆ ಎಂದು ಭಾವಿಸುತ್ತೇನೆ. ಇದರಲ್ಲಿ ಕೂದಲ ಎಳೆಯಷ್ಟು ಸಹ ಯಾವುದೇ ಅನುಮಾನ ಇಲ್ಲದಿರುವುದು ಸ್ಪಷ್ಟವಾಗಿದೆ. ಇಷ್ಟು ಹೇಳಿದ ಮೇಲೆಯು ಸಹ ಅವರಿಗೆ ಅನುಮಾನವಿದ್ದರೆ, ನಮ್ಮ ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ತನಿಖೆಯನ್ನು Subject Experts, People of Eminence ಯಾರು ಈ ಸಮಾಜದಲ್ಲಿ ಗುರುತರವಾದಂಥ ಹಾಗೂ ಜವಾಬ್ದಾರಿ ಇರುವಂಥ 3 ಸದಸ್ಯರ ನೇತೃತ್ವದಲ್ಲಿ ಒಂದು ಸಭೆಯನ್ನು ನೇಮಕ ಮಾಡಲಾಗುತ್ತದೆ. ಈ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿರುವುದರಿಂದ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಎಲ್ಲಾ ಶಾಲೆಗಳಿಗೆ ಹೋಗಬೇಕಾಗಿದ್ದು, ಮಾನ್ಯ ಸದಸ್ಯರೆಲ್ಲರೂ 3 ತಿಂಗಳು ಅಥವಾ 6 ತಿಂಗಳು ಸಮಯವನ್ನು ಕಲ್ಪಿಸಿದರೆ, ಅವರು ಆ ವರದಿಯನ್ನು ಸಲ್ಲಿಸಲಿ. ಯಾವ ವಿಶ್ವವಿದ್ಯಾಲಯ ಗುಣಮಟ್ಟ ಕಾಪಾಡಿಕೊಂಡಿರುವುದಿಲ್ಲವೋ ಅದನ್ನು ಮುಚ್ಚುವ ಕೆಲಸ ಮಾಡೋಣ. ಪರವಾನಗಿಯನ್ನು ರದ್ದುಗೊಳಿಸೋಣ. ಯಾವ ವಿಶ್ವವಿದ್ಯಾಲಯ ಗುಣಮಟ್ಟವನ್ನು ಕಾಯ್ದುಕೊಂಡು ನಮ್ಮ ರಾಜ್ಯದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ ಅಂತಹ ವಿಶ್ವವಿದ್ಯಾಲಯಗಳಿಗೆ ಮಾತ್ರ ಅವಕಾಶ ಕಲ್ಪಿಸೋಣ. ಈ ರಾಜ್ಯದ ಮಕ್ಕಳು, ಅನೇಕ ಶಿಕ್ಷಣ ಸಂಸ್ಥೆಗಳು ಈ ಸದನವನ್ನು ವೀಕ್ಷಣೆ ಮಾಡುತ್ತಿದ್ದು, ಅನೇಕರ ಭವಿಷ್ಯ ಇದರಲ್ಲಿ ಅಡಗಿರುವುದರಿಂದ ದಯವಿಟ್ಟು ಇದೆಲ್ಲವನ್ನೂ ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡು, ನಮ್ಮೊಂದಿಗೆ ಸಹಕರಿಸಬೇಕೆಂದು ತಮ್ಮ ಮೂಲಕ ಎಲ್ಲರಿಗೂ ಮನವಿ ಮಾಡಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಸದನದ ಭಾವಿಯಿಂದ ಅವರ ಸ್ಥಾನಕ್ಕೆ ತೆರಳಿದರು)**

**ಸಭಾಪತಿಯವರು:-** ಈಗಾಗಲೇ ಸಾಕಷ್ಟು ಮಾಹಿತಿಯನ್ನು ಮಾನ್ಯ ಸಚಿವರು ನೀಡಿದ್ದು, ತಾವು ಸಹ ಏನಾದರೂ ಹೇಳುವುದಾದರೆ ಹೇಳಬಹುದು. ನಂತರ ತೀರ್ಮಾನ ಮಾಡೋಣ.

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಈ ಸದನ ಚೆನ್ನಾಗಿ ನಡೆಯಬೇಕೆನ್ನುವುದು ನಮ್ಮ ಅಭಿಪ್ರಾಯವಾಗಿದ್ದು, ಕಾರಣಾಂತರದಿಂದ ಸದನ ನಡೆಯುತ್ತಿಲ್ಲ. ಈ ಮೊದಲು ಮಾನ್ಯ ವೈ.ಎ.ನಾರಾಯಣಸ್ವಾಮಿಯವರು, ನಂತರ ಮಾನ್ಯ ರಘುನಾಥ ರಾವ್ ಮಲ್ಕಾಪುರೆಯವರು, ತದನಂತರ ಮಾನ್ಯ ಎನ್.ರವಿಕುಮಾರ್‌ರವರು ಎಲ್ಲರೂ ಸದನ ಸಮಿತಿ ರಚನೆ ಮಾಡಲು ಕೋರಿದ್ದರು ಎಂದು ಸದನ ಸಮಿತಿ ರಚನೆ ಮಾಡಲಾಗಿತ್ತು. ಅದೇ ರೀತಿ ಇದಕ್ಕೂ ಸಹ ಸದನ ಸಮಿತಿ ರಚನೆ ಮಾಡಿದರೆ ಚೆನ್ನಾಗಿರುತ್ತಿತ್ತು. ಇಲ್ಲದಿದ್ದರೆ ಇದಕ್ಕೆ ಏನಾದರೂ ಪರಿಹಾರ ಹುಡುಕಿ ಮುಗಿಸಿದರೆ ಚೆನ್ನಾಗಿರುತ್ತಿತ್ತು. ಏಕೆಂದರೆ, ಕೆಳ ಮನೆಯಲ್ಲಿಯಾಗಲಿ, ಮೇಲ್ಮನೆಯಲ್ಲಿಯಾಗಲಿ ಹಲವಾರು ಸಂದರ್ಭದಲ್ಲಿ ಜೆ.ಡಿ.(ಎಸ್) ನವರು ಈ ಸರ್ಕಾರಕ್ಕೆ ಬಹಳ ಸಹಕಾರ ನೀಡಿದ್ದು, ಅವರು ಯಾವತ್ತೂ ಏನನ್ನು ಕೇಳಿರುವುದಿಲ್ಲ. ಆದರೆ, ಈಗ ಏನೋ ಒಂದು ಕೇಳಿದ್ದು, ಅದಕ್ಕೆ ಒಪ್ಪಿಕೊಂಡರೆ ಚೆನ್ನಾಗಿರುತ್ತಿತ್ತು.

**ಸಭಾಪತಿಯವರು:-** ಮಾನ್ಯ ಸದಸ್ಯರೆ ಏನೋ ಒಂದು ಕೇಳಿದ್ದಾರೆ ಅಂದರೆ ಏನು? ಅವರು ಏನೋ ಒಂದನ್ನು ಕೇಳಿಲ್ಲ. ಸದನ ಸಮಿತಿ ರಚನೆ ಮಾಡುವಂತೆ ಕೇಳಿದ್ದಾರೆ, ಏನೋ ಒಂದು ಕೇಳಿಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಹೌದು. ಈಗಾಗಲೇ ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಸದನ ಸಮಿತಿ ರಚನೆ ಮಾಡುವಂತೆ ಕೇಳಿದ್ದು, ಅದಕ್ಕೆ ಅನುಮೋದನೆ ನೀಡಲಾಗಿದೆ. ಅದೇ ರೀತಿ ಮಾನ್ಯ ರಘುನಾಥ ರಾವ್ ಮಲ್ಕಾಪೂರೆಯವರು ಸದನ ಸಮಿತಿ ರಚನೆ ಮಾಡುವಂತೆ ಕೇಳಿದ್ದು, ಅದಕ್ಕೆ ಅನುಮೋದನೆ ನೀಡಲಾಗಿದೆ. ಈಗ ಜೆ.ಡಿ.(ಎಸ್) ನವರು ಸದನ ಸಮಿತಿ ರಚನೆ ಮಾಡಬೇಕೆಂದು ಕೇಳುತ್ತಿದ್ದು, ಅದಕ್ಕೆ ಒಪ್ಪಿಗೆ ಸೂಚಿಸಲಿ, ಅದರಲ್ಲಿ ಏನಿದೆ?

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರು ಗಮನ ಸೆಳೆಯುವ ಸೂಚನೆಯಡಿ ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದು, ಅವರು ಸಹ ಮಾನ್ಯ ರಾಜೀವ್‌ಗಾಂಧಿ ವಿಶ್ವವಿದ್ಯಾಲಯದಲ್ಲಿ ಹಾಲಿ Senate Member ಆಗಿದ್ದಾರೆ. ಅಲ್ಲಿ Senate Member ಆಗಿರುವವರೆ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದು, ಅದಕ್ಕೆ ಮಾನ್ಯ ಸಚಿವರು ಸಹ ಪ್ರಸ್ತಾಪ ಮಾಡಿದ್ದಾರೆ. ಈ ವಿಷಯವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ 47 ವಿಶ್ವವಿದ್ಯಾಲಯಗಳೇನಿವೆ, ಅವುಗಳಿಗೆ ಅನುಮತಿ ನೀಡಬೇಕೆಂದು High Power Committee ಯಲ್ಲಿ ತೀರ್ಮಾನವಾಗಿದೆ ಎಂಬುದರ ಬಗ್ಗೆ ಚರ್ಚೆಯಾಗಿತ್ತು. ಆ ಸಂದರ್ಭದಲ್ಲಿ ನಾವುಗಳೆಲ್ಲಾ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ಸಿಗುತ್ತಿಲ್ಲ, ಮೂಲಭೂತ ಸೌಲಭ್ಯಗಳಿಲ್ಲ, INC (Indian Nursing Council) ನಿಯಮದ ಪಾಲನೆ ಸರಿಯಿಲ್ಲ, ಇದರಲ್ಲಿ ದುಡ್ಡಿನ ದಂಧೆ ನಡೆಯುತ್ತಿದೆ, ಇದಕ್ಕೆಲ್ಲಾ ಕಡಿವಾಣ ಹಾಕಬೇಕೆಂದು ಹೇಳುತ್ತಿರುವಾಗ ಹೊಸದಾಗಿ ತೆರೆದಿರುವಂಥ ಕಾಲೇಜುಗಳಲ್ಲಿ ಸಹ ಮೂಲಭೂತ ಸೌಲಭ್ಯ ಇಲ್ಲವೆಂದು Senate Member ಆದ ಮಾನ್ಯ ರವಿಕುಮಾರ್‌ರವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕಾಗಿ ಒಂದು ಸದನ ಸಮಿತಿ ರಚನೆ ಮಾಡುವಂತೆ ಎಲ್ಲರೂ ಸಹ ಸಮರ್ಥವಾಗಿ ಕೇಳಿಕೊಂಡೆವು. ಸದನ ಸಮಿತಿ ರಚನೆ ಎಂದ ಕೂಡಲೇ ಮಾನ್ಯ ಸಚಿವರು ನನ್ನ ಸಹ ಉತ್ತರ ನೀಡಿದ್ದು, ಈ ರಾಜ್ಯದಲ್ಲಿ ಯಾವ್ಯಾವ ವಿಶ್ವವಿದ್ಯಾಲಯಗಳು ಪ್ರಾರಂಭಗೊಂಡಿವೆ, ಅವೆಲ್ಲದಕ್ಕೂ ಹೋಲಿಕೆ ಮಾಡಿ ನೋಡಿದಾಗ ಈಗ ತೆರೆದಿರುವಂಥ ವಿಶ್ವವಿದ್ಯಾಲಯದಲ್ಲಿ ಏನೂ ಇಲ್ಲ, 2020-21ನೇ ಸಾಲಿಗೆ ನಾನು ನೀಡಿರುವಂಥದನ್ನು ಹಿಡಿದುಕೊಂಡಿದ್ದೀರಿ, ತನಿಖೆ ಮಾಡುವುದಾದರೆ ಹಿಂದಿನವು ಸಹ ತನಿಖೆ ಮಾಡಿಸುತ್ತೇನೆ ಎನ್ನುವಂಥ ಮಾತನ್ನು ಹೇಳಿದರು. ಅವರು ಮಾತನಾಡುವಂಥ ಸಂದರ್ಭದಲ್ಲಿ ನಮ್ಮನ್ನು ಗಾಬರಿಪಡಿಸಿ, ಆ 600 ವಿಶ್ವವಿದ್ಯಾಲಯದಲ್ಲಿ ನಮಗೆ ಸಂಬಂಧಪಟ್ಟಂತಹ ಯಾವುದೋ ವಿಶ್ವವಿದ್ಯಾಲಯ ಇರಬಹುದೆಂದು ನಾವು ಗಾಬರಿಪಟ್ಟು ಹಿಂದಕ್ಕೆ ಸರಿಯಬೇಕು ಎನ್ನುವ ಮಟ್ಟಕ್ಕೆ ಇಳಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಜೀವನದಲ್ಲಿ ಒಮ್ಮೆಯಾದರೂ ಗಾಬರಿಯಾಗಲಿ ಎಂದು ಮಾನ್ಯ ಸಚಿವರು ಹೇಳಿರಬಹುದು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಬಹಳ ಗಾಬರಿಯಾಗಿತ್ತು. ಈಗಾಗಲೇ ಮಾನ್ಯ ಸಚಿವರು ರಾಜೀವ್‌ಗಾಂಧಿ ವಿಶ್ವವಿದ್ಯಾಲಯದ ನಿಯಮಗಳು, ಸ್ವಾಯತ್ತತೆ ಬಗ್ಗೆ ತಿಳಿಸಿದ್ದಾರೆ. INC ನಿಯಮಾವಳಿ ಪ್ರಕಾರ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಲ್ಲಿ ಸ್ವಾಯತ್ತತೆ ಎಲ್ಲಿ ಇದೆ. ಅವರು ಒಂದು ಸಲ Affiliation Committee, Academic Council, Syndicate ನಲ್ಲಿ ನಿರ್ಣಯವಾದ ಮೇಲೆ ಅದನ್ನು ಪ್ರಶ್ನೆ ಮಾಡಲು ಎಲ್ಲಿಯು ಸಹ Autonomous Institution ನ ಸಾಧಕ-ಬಾಧಕಗಳ ಬಗ್ಗೆ, ಮೂಲಸೌಕರ್ಯಗಳ ಬಗ್ಗೆ, ಪ್ರತಿಯೊಂದು faculty ಬಗ್ಗೆ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿ, Experts Committee ನೀಡಿದಂಥ ವರದಿಯನ್ನು ತೆಗೆದುಕೊಂಡು ಸರ್ಕಾರ ನೀಡುವುದು ರೂಡಿ. ಮಾನ್ಯ ಸಚಿವರು High Power Committee ಮಾಡಿ, 62 ಸಂಸ್ಥೆಗಳಿಗೆ recommend ಮಾಡಿದ್ದು, ಹೈ ಪವರ್ ಕಮಟಿಯವರು 47 ಸಂಸ್ಥೆಗಳಿಗೆ ನಿಲ್ಲಿಸಿದ್ದಾರೆ. High Power Committee ಯಲ್ಲಿ ಸ್ಥಳ ಪರಿಶೀಲನೆ ಇಲ್ಲ, ಕೇವಲ ದಾಖಲೆಗಳ ಪರಿಶೀಲನೆ ಮಾಡಲಾಗುತ್ತದೆ. ಈಗಾಗಲೇ ಮಾನ್ಯ ಸಚಿವರು ಸಹ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ, LIC (Local Inquiry Committee) ಯವರು ಪ್ರತಿಯೊಂದು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸುತ್ತಾರೆ, ಜೊತೆಗೆ faculty and physically ಎಲ್ಲವನ್ನೂ ನೋಡಿ ವರದಿ ನೀಡುತ್ತಾರೆ. ಆದರೆ, 62 ಸಂಸ್ಥೆಗಳಿಗೆ ಸಂಬಂಧಿಸಿದಂತೆ ದಾಖಲೆಯನ್ನು ನೋಡಿ High Power Committee ಅವರನ್ನು ತಿರಸ್ಕರಿಸಲಾಗಿತ್ತು. ಏಕೆಂದರೆ, 120 ಅರ್ಜಿಯಲ್ಲಿ ಯಾರು ವಿಶ್ವವಿದ್ಯಾಲಯಕ್ಕೆ ದುಡ್ಡು ನೀಡಿದರೂ ಅಂಥವರ 62 ಅರ್ಜಿಗಳು ಪಾಸ್ ಮಾಡಿದ್ದು, ಯಾರು High Power Committee ಗೆ ದುಡ್ಡು ನೀಡಲಿಲ್ಲವೋ ಅಂತಹ 47 ಅರ್ಜಿಗಳು ಹಾಗೆ ಉಳಿದುಕೊಂಡವು. ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾಲಯವನ್ನು ತನಿಖೆ ಮಾಡಲು ಅವರು ಒಪ್ಪಲಿ, ನಾವು ಅದನ್ನು ಸ್ವಾಗತ ಮಾಡುತ್ತೇವೆ. ಆದರೆ, 47 ನರ್ಸಿಂಗ್ ಕಾಲೇಜ್‌ಗೆ ಸಂಬಂಧಪಟ್ಟಂತೆ ಏನು recommend ಮಾಡಿದ್ದಾರೆ, ಅದನ್ನು ಅವರ ಅಧ್ಯಕ್ಷತೆಯಲ್ಲಿಯೇ ಸ್ಥಳ ಪರಿಶೀಲನೆ ಮಾಡೋಣವೇ?

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

INC ನಿಯಮದ ಪ್ರಕಾರ ಇದರಲ್ಲಿ ಶೇ. 50 ರಷ್ಟು ಸಂಸ್ಥೆಗಳು ಸರಿಯಾಗಿದ್ದರೆ, ನನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತೇನೆ. ಮಾನ್ಯ ಸಚಿವರು ಉತ್ತರ ನೀಡುವಂಥ ಸಂದರ್ಭದಲ್ಲಿ ಹಿಂದೆ ವೈದ್ಯಕೀಯ ಶಿಕ್ಷಣಕ್ಕೆ Doctorate ಪದವಿ ಹೊಂದಿಲ್ಲದವರನ್ನು ನೇಮಕ ಮಾಡಿರುವುದರಿಂದ ಈಗಿನ ವ್ಯವಸ್ಥೆಯು ಹಾಳಾಗಿದೆ; ನಾನು ಬಂದ ಮೇಲೆ ಇದನ್ನು streamline ಮಾಡಬೇಕೆಂದು, ಇದರಲ್ಲಿರುವ ವಿಚಾರವನ್ನು ಒಬ್ಬ ತಜ್ಞನಾಗಿ ಪಟ್ಟಿ ಮಾಡಿದ್ದೇನೆ ಎಂದು ಓದಿ ಹೇಳಿದರು. ಮಾನ್ಯ ಸಚಿವರು ಖಾತೆಯನ್ನು ವಹಿಸಿಕೊಂಡ ಮೇಲೆ ಅವರು ನೀಡಿರುವ ಪಟ್ಟಿಯ ಪ್ರಕಾರ ಯಾವುದಾದರೂ ವಿಶ್ವವಿದ್ಯಾಲಯವು ಕಾರ್ಯಗತವಾಗಿದರೆ,... ಅವರು ಪಟ್ಟಿ ಮಾಡಿರುವುದು ಹಣ ವಸೂಲಿ ಮಾಡಲು ಎಂದು ಈ ದೇಶದ ಜನರು ಹೇಳುತ್ತಿದ್ದಾರೆ. ವೈದ್ಯಕೀಯ ಶಿಕ್ಷಣದಲ್ಲಿ ದಂಧೆಯಾಗಿದ್ದು...

**(ಗೊಂದಲ)**

**ಡಾ॥ ತೇಜಸ್ವಿನಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೇಜವಾಬ್ದಾರಿತನದಿಂದ ಟೀಕೆ ಮಾಡುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಅವರ ದಂಧೆಯನ್ನು ಈ ದೇಶ, ನಾಡಿನ ಜನರು ಹೇಳುತ್ತಾರೆ.

**ಡಾ॥ ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಯಾವ ಉದ್ದೇಶವನ್ನಿಟ್ಟುಕೊಂಡು ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ? ಈ ಸದನದ ಮೂಲಕ ಈ ರೀತಿ ಮಾತನಾಡಿ, ಹಣವನ್ನು ವಸೂಲಿ ಮಾಡುವ ಉದ್ದೇಶ ಅವರದಾಗಿರಬಹುದು. ಬೇಜವಾಬ್ದಾರಿತನದಿಂದ ಅವರು ಟೀಕೆ ಮಾಡುತ್ತಿದ್ದಾರೆ.

**ಡಾ॥ ಕೆ.ಸುಧಾಕರ್ (ವೈದ್ಯಕೀಯ ಶಿಕ್ಷಣ ಸಚಿವರು):–** ಯಾರ್ಯಾರು ಹಣ ವಸೂಲಿ ಮಾಡಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗುತ್ತದೆ. ಅದು ಒಂದು ರೀತಿಯ ಅಭ್ಯಾಸವಾಗಿದ್ದು, ಅವರಿಗೆ ಅದು ಕರಗತವಾಗಿಬಿಟ್ಟಿದೆ. ಅದಕ್ಕಾಗಿಯೇ ಅವರು ಸದನ ಸಮಿತಿ ರಚನೆ ಮಾಡಬೇಕೆಂದು ಹೇಳುತ್ತಿರುವುದು. ನಿನ್ನೆಯಿಂದ ಯಾರು ಅವರಿಗೆ ಫೋನ್ ಮಾಡಿಲ್ಲವೇನೋ, ಗೊತ್ತಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಲ್ಲವನ್ನೂ ಸುಧಾರಣೆ ಮಾಡುವುದಕ್ಕಾಗಿ ಮಾಡಿದ್ದೇನೆ, ಅವಶ್ಯಕವಿದ್ದರೆ ತನಿಖೆ ಮಾಡಿಸುತ್ತೇನೆ ಎಂದು ಹೇಳುತ್ತಾರೆ. ಆದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಕ್ಕೆ ಸಂಬಂಧವಿಲ್ಲದಂಥ ತಜ್ಞ ವೈದ್ಯರ ಕಮಿಟಿ ಮಾಡಿಸುತ್ತೇವೆ ಅಥವಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಂದ ತನಿಖೆ ಮಾಡಿಸುತ್ತೇವೆ ಎಂದು ಹೇಳುತ್ತಾರೆ.

**(ಮುಂದು)**

(521) 19.03.2021/11.50/ಎಸ್‌ಕೆ-ಎಂಡಿ

**ಶ್ರೀ ಮರಿತಿಬ್ಬೇಗೌಡ (ಮುಂದು):-**

ಈ ಸರ್ಕಾರಕ್ಕೆ ಶಾಸಕರುಗಳಿರುವ ಸದನ ಸಮಿತಿ ಸಭೆಯ ಬಗ್ಗೆ ವಿಶ್ವಾಸವಿಲ್ಲ. ಅವರು ನಾವು ಏನು ಮಾಡಿಲ್ಲವೆಂದು ಹೇಳುತ್ತಾರೆ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಆಗಿರುವುದೆಲ್ಲಾ ಹಳೆಯದೇ, ಹೊಸದೇನು ಇರುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಎಲ್ಲಾ ನರ್ಸಿಂಗ್ ಕಾಲೇಜುಗಳಲ್ಲಿ ಮಣ್ಣುಪಾಲಾಗಿರುವಂತಹ ಘನತೆ-ಗೌರವವನ್ನು ಮುಗಿಲ ಎತ್ತರಕ್ಕೆ ತೆಗೆದುಕೊಂಡು ಹೋಗುವಂಥದ್ದಕ್ಕೆ ಶಾಸಕರ ಸಮಿತಿ ಸಭೆಯಲ್ಲಿ ಪರಿಶೀಲನೆ ಮಾಡುವುದು ಬೇಕಾಗಿಲ್ಲ. ಯಾವುದೋ ಒಬ್ಬ ಅಧಿಕಾರಿ ನೇತೃತ್ವ ಅಥವಾ ತಜ್ಞ ವೈದ್ಯರು ಅಥವಾ experts ರಿಂದ ನಾವು ತನಿಖೆ ಮಾಡಿಸುತ್ತೇವೆಂದು ಹೇಳುತ್ತಾರೆ. ಇದೇ experts committee ಸ್ವಾಮಿ ಇವರೆಲ್ಲರಿಗೂ ರೆಕ್‌ಮೆಂಡ್ ಮಾಡಿರುವುದು. ತಜ್ಞರ ಸಮಿತಿ ಈ ವಿಶ್ವವಿದ್ಯಾನಿಲಯದಲ್ಲಿ ಸರ್ಕಾರ ನೇಮಕ ಮಾಡಿರುವಂತಹ Syndicate, Senate, Academic Council... ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ಅದು Experts Highest Body. ಅವರೇ ಸ್ವಾಮಿ ಈ ಎಲ್ಲಾ ಕೆಲಸವನ್ನು ಮಾಡಿರುವುದು. ಸರ್ಕಾರಕ್ಕೆ ಅವರ ಬಗ್ಗೆ ನಂಬಿಕೆ ಇದೆ. ಆದರೆ ಸದನ ಸಮಿತಿಯ ಬಗ್ಗೆ ನಂಬಿಕೆ ಇಲ್ಲ. ಇಷ್ಟೊಂದು ಪಾರದರ್ಶಕವಾಗಿ ಹೇಳುವಂತಹ ಜನರಾಗಿದ್ದಾರೆ. ಸ್ವಾಮಿ ದಯವಿಟ್ಟು, ಸದನ ಸಮಿತಿಯ ಬಗ್ಗೆ ನಂಬಿಕೆ ವಿಶ್ವಾಸವಿರಬೇಕು. ಪಾರದರ್ಶಕ ಇರತಕ್ಕಂತಹವರು ಪ್ರಮಾಣಿಕವಾಗಿ ಸತ್ಯ ಹರಿಶ್ಚಂದ್ರ ಎಂದು ಹೇಳುವವರು ಸದನ ಸಮಿತಿಯನ್ನು ಗೌರವಿಸಲಿ. ಇದಕ್ಕೆ ಸದನ ಸಮಿತಿ ಮಾಡಲಿ. ಪಾರದರ್ಶಕತೆ ಆದರೆ, ಸತ್ಯ ಹರಿಶ್ಚಂದ್ರ ನಮ್ಮ ಮನೆಯಲ್ಲಿದ್ದಾರೆ ಎನ್ನುತ್ತಾರಲ್ಲ. ಇದರಲ್ಲಿ ಯಾವ ಮಾತು ಬರುವುದಿಲ್ಲ....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಸದನ ಸಮಿತಿಗೆ dictate ಮಾಡುವುದಕ್ಕೆ ಬರುವುದಿಲ್ಲ. ಈ ಸದನವನ್ನು ಯಾರೂ dictate ಮಾಡುವುದಕ್ಕೆ ಸಾಧ್ಯವಿಲ್ಲ.

**(ಗೊಂದಲ)**

ಬಿ.ಜೆ.ಪಿ. ಸರ್ಕಾರ ಅವರು ಹೇಳಿರುವುದನ್ನು ತಿರಸ್ಕರಿಸಿದೆ. ನಮಗೆ ವಿಶ್ವಾಸವಿದೆ. ನಮ್ಮ ಸರ್ಕಾರದಲ್ಲಿ ಆ ರೀತಿ ಯಾವುದೇ ಅವ್ಯವಹಾರ ನಡೆದಿಲ್ಲ. ನಮ್ಮ ಸರ್ಕಾರದ ಮೇಲೆ ನಮಗೆ ವಿಶ್ವಾಸವಿದೆ.

**(ಗೊಂದಲ)**

**Dr.K.SUDHAKAR (Minister for Health and Family Welfare and Medical Education):-** He is not the final authority. ನಾವು ಕೆಲಸ ಮಾಡಬೇಕಾಗುತ್ತದೆ ಹಾಗೂ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗಿದೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ಎಲ್ಲರೂ ಮಾತನಾಡಬೇಡಿ.

**(ಗೊಂದಲ)**

**Dr.K.SUDHAKAR:-** We have the mandate. ನಾವು mandate ನಿಂದ ನಾವು ಕೆಲಸ ಮಾಡಬೇಕಾಗುತ್ತದೆ. ಸರ್ಕಾರ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ ಸದನದ ಸಮಯ ಹಾಳಾಗುತ್ತಿಲ್ಲವೇ? ನಮ್ಮ ಹಕ್ಕು ಮೊಟಕುಗೊಳ್ಳುತ್ತಿಲ್ಲವೇ?

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಸಚಿವರು ಮಾತನಾಡುವಾಗ....

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಒಂದು ನಿಮಿಷ. ಮಾನ್ಯ ಮರಿತಿಬ್ಬೇಗೌಡರೇ...

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸಚಿವರು ಮಾತನಾಡುತ್ತಿದ್ದಾರೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ನಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿಲ್ಲವೇ? ನಾವು ಹಾಜರಾತಿ ಹಾಕುವುದಕ್ಕೆ ಇಲ್ಲಿಗೆ ಏತಕ್ಕೆ ಬರುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ತಡೆಯಿರಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಿನ್ನೆಯಿಂದ ತಾವು ಬೇಕಾದಷ್ಟು ಸಮಯವನ್ನು ಕೊಟ್ಟಿದ್ದೀರಿ. ಎಲ್ಲಾ ರೀತಿಯ ಅವಕಾಶವನ್ನು ಕೊಟ್ಟರೂ ಸಹ ಈ ರೀತಿ ಬೇಜವಾಬ್ದಾರಿತನದಿಂದ ಟೀಕೆ ಮಾಡುವುದು ಸರಿಯಲ್ಲ.

**ಶ್ರೀ ಮರಿತಿಬ್ಬೇಗೌಡ:–**ಆಯಿತು ಅಕ್ಕ. ಮಾನ್ಯ ಸಭಾಪತಿಯವರೇ,

**ಡಾ॥ ತೇಜಸ್ವಿನಿ ಗೌಡ:– ಮಾನ್ಯ ಸಭಾಪತಿಯವರೇ,** ಎಲ್ಲಾ ರೀತಿಯ ಅವಕಾಶಗಳನ್ನು ಕೊಟ್ಟರೂ ಕೂಡ ಈ ರೀತಿ ಬೇಜವಾಬ್ದಾರಿತನದಿಂದ ಮಾತನಾಡುವುದು ಸರಿಯಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಮಾತನಾಡುವುದಕ್ಕೆ ಎಷ್ಟು ಸಲ ಅವಕಾಶ ಕೊಡುತ್ತೀರಾ?

**ಡಾ॥ ತೇಜಸ್ವಿನಿ ಗೌಡ:–** ಸರಿಯಲ್ಲ.

(ಗೊಂದಲ)

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸದಸ್ಯರು ರಾಜೀನಾಮೆ ಕೊಡುತ್ತಾರೆಂದು ಹೆದರಿಸುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಸಭಾಪತಿಯವರು:–** ಒಂದು ನಿಮಿಷ ತಡೆಯಿರಿ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪದೇ ಪದೇ ಅದೇ ವಿಷಯವನ್ನು ಹೇಳುತ್ತಾರೆ. ಬೇರೆ ಯಾವುದೇ ವಿಷಯಗಳನ್ನು ...

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಮಾನ್ಯ ಸದಸ್ಯರ್‍ಯಾರು ಮಾತನಾಡಬೇಡಿ. ಒಂದು ನಿಮಿಷ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಚಿವರು ಕೊಟ್ಟಂತಹ ಉತ್ತರದಿಂದ ಅವರು ಸಮಾಧಾನಪಟ್ಟಿದ್ದಾರೆ. ಮಾನ್ಯ ರವಿಕುಮಾರ್‌ರವರು ತಂದಂತಹ ವಿಷಯದ ಮೇಲೆ ಮಾತನಾಡಲು ಅವಕಾಶವನ್ನು ತಾವು ಕೊಟ್ಟಿದ್ದೀರಿ. ಈ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ...

**ಸಭಾಪತಿಯವರು:–** ಮಾನ್ಯ ಸಂಕನೂರರವರೇ ತಮಗೆ ಮಾತನಾಡಲು ಯಾರು ಅವಕಾಶ ಮಾಡಿಕೊಟ್ಟರು? ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ,

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಮರಿತಿಬ್ಬೇಗೌಡರೇ ತಮ್ಮ ಮಾತನ್ನು ಮುಗಿಸಿ.

**ಶ್ರೀ ನಿರಾಣಿ ಹನುಮಂತಪ್ಪ ರುದ್ರಪ್ಪ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ವಿಷಯವನ್ನು ತೆಗೆದುಕೊಂಡು ಕಾಲಾಹರಣ ಮಾಡಿದರೆ ಹೇಗೆ?

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ ನನ್ನ ಮಾತನ್ನು ಮುಗಿಸಿಬಿಡುತ್ತೇನೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ತಮ್ಮ ಮಾತನ್ನು ಸಾಕು ಮಾಡಿ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಆಗಲ್ಲ ಸಾರ್.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ ತಾವು ಎಷ್ಟು ಹೊತ್ತು ಮಾತನಾಡುತ್ತೀರಾ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅವರು ಅರ್ಧ ಗಂಟೆಗಳ ಕಾಲ ಮಾತನಾಡಿದ್ದಾರೆ.

**ಸಭಾಪತಿಯವರು:–** ಇಲ್ಲ. ಈಗ ಮಾನ್ಯ ಸಚಿವರು ಹೇಳಿದ್ದಾರೆ. ಸಭಾಪತಿಯವರು ಹೇಳಿದಂತೆ, ತಾವು ಕೇಳಬೇಕು.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಿನ್ನೆಯ ದಿವಸದಿಂದ ಮಾನ್ಯ ಸಚಿವರ ವಿರುದ್ಧ ಆರೋಪ ಮಾಡಿದ್ದಾರೆ. ಮಾನ್ಯ ಸಚಿವರು ಈ ವಿಷಯದ ಬಗ್ಗೆ ಉತ್ತರ ಕೊಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ತೇಜಸ್ವಿನಿ ಗೌಡರವರೇ ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಮ್ಮ ಹಕ್ಕನ್ನು ಮೊಟಕುಗೊಳಿಸುತ್ತಿದ್ದಾರೆ.

**ಸಭಾಪತಿಯವರು:–** ಒಂದು ನಿಮಿಷ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ body language ಮತ್ತು ಭಾಷೆ ಈ ಸದನಕ್ಕೆ ಶೋಭೆ ತರತಕ್ಕದ್ದಲ್ಲ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷಗಳ ಕಾಲ ನಾನು ಮಾತನಾಡುತ್ತೇನೆ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:–** ನೇರ ಆರೋಪ.... ನಮ್ಮ ಸರ್ಕಾರ ಏನೂ ಹಣ ಮಾಡುತ್ತಿಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಎರಡೇ ನಿಮಿಷಗಳ ಕಾಲ ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ತಾವು ಮುಗಿಸಿ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮೊದಲು ದಯಮಾಡಿ...

**(ಗೊಂದಲ)**

**ಡಾ|| ಕೆ. ಸುಧಾಕರ್:–** ಇವತ್ತು ಸರ್ಕಾರ ಬಹಳ ಸ್ಪಷ್ಟವಾಗಿ ...

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಮಾನ್ಯ ಸಚಿವರು ಮಾತನಾಡುವಾಗ ...

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ ನನ್ನ ಮಾತನ್ನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ ತಮ್ಮ ಮಾತನ್ನು ಸಾಕು ಮಾಡಿ. ಮಾನ್ಯ ರವಿಯವರೇ ನಾನು ಹೇಳುವವರೆಗೂ ಸ್ವಲ್ಪ ಕಾಯಿರಿ. ತಮ್ಮ ಮಾತನ್ನು ಸಾಕು ಮಾಡಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಚಿವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ ಎರಡು ನಿಮಿಷ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಕುಳಿತುಕೊಳ್ಳಿ ಎಂದು ಹೇಳಿದ್ದೇನಲ್ಲ. **(ಗೊಂದಲ)** ಒಂದು ನಿಮಿಷ. ಎಲ್ಲರೂ ಸುಮ್ಮನಿರಿ. ಎಲ್ಲರೂ ಹುಡುಗಾಟಿಕೆ ಮಾಡುತ್ತೀರಾ? ಸಣ್ಣ ಮಕ್ಕಳ ತರಹ ಆಡುತ್ತೀರಾ? ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಯಾರಿಗೂ ಮಾತನಾಡುವುದಕ್ಕೆ ಕೊಡುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಬೆಳಗ್ಗೆ ಸದನವನ್ನು 10 ಗಂಟೆಗೆ ಸರಿಯಾದ ಸಮಯಕ್ಕೆ ಕರೆದಿರಿ. ಇವತ್ತು ಬಹಳಷ್ಟು ವಿಚಾರಗಳು ಚರ್ಚೆಗೆ ಇತ್ತು.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ ...

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೇ, ಕುಳಿತುಕೊಳ್ಳಿ. ನಾನು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಅವರು ಮಾತನಾಡಿದ್ದು ಯಾವುದು ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಮಾನ್ಯ ಸದಸ್ಯರು ಮಾತನಾಡಿದ್ದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ.)**

**ಶ್ರೀ ಎಸ್.ಆರ್. ಪಾಟೀಲ್:-** ಇಲ್ಲಿ ಜಾತ್ಯಾತೀತ ಪಕ್ಷದ ಸದಸ್ಯರೆಲ್ಲರೂ ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ತಮಗೂ ಸಹ ಅವರು ಗೌರವ ಕೊಡುವುದಿಲ್ಲ. **(ಗೊಂದಲ)** ಪ್ರತಿ ಸಂದರ್ಭದಲ್ಲಿಯೂ ಕೂಡ ಅವರಿಗೆ habit ಮಾಡಿಕೊಂಡು ಬಿಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ. ಅವರು ಮಾತನಾಡಲಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ ನನಗೆ ಮಾತನಾಡಲು ಅವಕಾಶ...

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ತಮಗೆ ಮಾತನಾಡಲು ಅವಕಾಶ ಕೊಡುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** ಮಾನ್ಯ ಮರಿತಿಬ್ಬೇಗೌಡರೇ ತಾವು ಬಹಳ ಸಮಯ ಮಾತನಾಡಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ. **(ಗೊಂದಲ)** ಅದನ್ನು ಕೇಳುವ ಅಧಿಕಾರ ತಮಗೆ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ತಮಗೆ ತಿಳಿಯುವುದಿಲ್ಲವೇ? **(ಗೊಂದಲ)** ನಾನು ಹೇಳುವುದನ್ನು ತಾವು ಕೇಳುವುದಿಲ್ಲವೇ? ಇದು ಸರಿಯಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . . .

**ಸಭಾಪತಿಯವರು:–** ನಾನು ತಮಗೆ ಮಾತನಾಡಲು ಅನುಮತಿ ಕೊಡುವುದಿಲ್ಲ ಎಂದು ಹೇಳುತ್ತಿದ್ದೇನೆ. **(ಗೊಂದಲ)** ಅದನ್ನು ಕೇಳುವುದಕ್ಕೆ ತಾವು ಯಾರು? ದಯವಿಟ್ಟು ಕುಳಿತುಕೊಳ್ಳಿ. ವಿರೋಧಪಕ್ಷದ ನಾಯಕರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

**(ಗೊಂದಲ)**

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇದು ಮಾನ್ಯ ರವಿಕುಮಾರ್‌ರವರು ತಂದಂತಹ ವಿಷಯಕ್ಕೆ ಸಂಬಂಧಪಟ್ಟಿದೆ. . . .

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಿನ್ನೆ ಸಂಜೆಯಿಂದ ಇಲ್ಲಿಯವರೆಗೂ ...

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ಕೆ. ಸುಧಾಕರ್:-** ಮಾನ್ಯ ಸಭಾಪತಿಯವರೇ, . . ..

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ತಮಗೆ ಮಾತನಾಡಲು ಅವಕಾಶವನ್ನು ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಿನ್ನೆ ಸಂಜೆ ಒಂದು ಸುತ್ತಿನ ಮಾತುಕತೆ ಕೂಡ ತಮ್ಮ chamber ನಲ್ಲಿ ನಡೆಯಿತು. ಅದರಲ್ಲಿ ಸುದೀರ್ಘವಾದಂತಹ ಚರ್ಚೆಯಾಯಿತು. ಸದನ ಮುಗಿದ ನಂತರ ತಾವು ಸುಮಾರು 10.00 ಗಂಟೆಯವರೆಗೆ ಜಾತ್ಯಾತೀತ ಪಕ್ಷದ ಸದಸ್ಯರೊಂದಿಗೆ ಹೋಗಿ ಇತ್ಯರ್ಥ ಮಾಡಿದಿರಿ. ಇವತ್ತು ಬೆಳಿಗ್ಗೆ ಸದನ ಪ್ರಾರಂಭವಾದ ಕೂಡಲೇ ನಾನು ಒಂದು ಸಲಹೆ ಮಾಡಿದೆ. ಏನೆಂದರೆ, ಇನ್ನೊಂದು ಸುತ್ತಿನ ಮಾತುಕತೆ ಮಾಡಿ, ಒಂದು ಇತ್ಯರ್ಥಕ್ಕೆ ಬರೋಣವೆಂದು ತಿಳಿಸಿದೆ. ಆದರೆ ಸದನ ಸದನ ಸಮಿತಿ ರಚನೆ ಮಾಡಬೇಕೆಂದು ಜಾತ್ಯಾತೀತ ದಳದ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಸರ್ಕಾರ ಪ್ರತಿಷ್ಠೆಗೆ ಬಿದ್ದು, ಸದನ ಸಮಿತಿಯ ಬದಲಾಗಿ ಬೇರೆ ಬೇರೆ ವಿಚಾರಗಳನ್ನು ಹೇಳಿದರು. ತಮ್ಮ ಛೇಂಬರ್‌ನಲ್ಲಿ ಮಾನ್ಯ ಬಸವರಾಜು ಬೊಮ್ಮಾಯಿಯವರು ಮೂರನೇ ವ್ಯಕ್ತಿಯಾಗಿ ಮತ್ತು ಮಾನ್ಯ ಗೋವಿಂದ ಎಂ ಕಾರಜೋಳರವರು ಒಬ್ಬ ಹಿರಿಯ ಅತ್ಯಂತ ಪ್ರಮಾಣಿಕ ಐ.ಎ.ಎಸ್ ಅಧಿಕಾರಿಯನ್ನು ನೇಮಿಸೋಣವೆಂದಾಗ ಬೇಡ, ಮೂರನೇ ವ್ಯಕ್ತಿ ಎಂದರೆ ಡಾ॥ ಮಂಜುನಾಥ್‌ರವರು ವೈದ್ಯಕೀಯ ಕ್ಷೇತ್ರದಲ್ಲಿ ಪ್ರಖ್ಯಾತಿಯನ್ನು ಪಡೆದಂತಹವರು. ಮೂರು ಸದಸ್ಯರನ್ನೊಳಗೊಂಡ ಕಮಿಟಿಯನ್ನು ಮಾಡೋಣವೆಂದಾಗ, ಅದರ ಬಗ್ಗೆ ಚರ್ಚೆಯಾಗಲಿಲ್ಲ. ಇದನ್ನು ಏನಾದರೊಂದು ಇತ್ಯಾರ್ಥಕ್ಕೆ ತರಲೇಬೇಕಲ್ಲ. ಏಕೆಂದರೆ ಸದನ ಬಹಳ ಮಹತ್ವದ್ದು. ಇದು ಬಜೆಟ್ ಅಧಿವೇಶನ. ನಮ್ಮ ಅನೇಕ ಸ್ನೇಹಿತರು ಬಜೆಟ್ ಮೇಲೆ ಮಾತನಾಡಿ, ಬೆಳಕು ಚೆಲ್ಲುವಂತಹವರಿದ್ದಾರೆ. ನಾಡಿನ ಸಮಸ್ತ ಜನತೆಯ ಅನೇಕ ಸಮಸ್ಯೆಗಳ ಬಗ್ಗೆ ಈ ಸದನದಲ್ಲಿ ಇತ್ಯಾರ್ಥವಾಗಬೇಕಾಗಿದ್ದು ಬಹಳ ಅವಶ್ಯಕತೆ ಇದೆ. ಈ ನಾಡಿನ ಸುಮರು 6.5 ಕೋಟಿ ಜನತೆಯ ಹಿತದೃಷ್ಟಿಯಿಂದ ಈ ಸದನ ನಡೆಯಬೇಕಾಗಿದೆ. ಇದೇ ಎಲ್ಲರ ಅಭಿಪ್ರಾಯವಾಗಿದೆ. ತಮ್ಮದೂ ಕೂಡ ಅದೇ ಅಭಿಪ್ರಾಯವಾಗಿದೆ. ಬಹುತ್ತರವಾಗಿ ಸರ್ಕಾರದ ಅಭಿಪ್ರಾಯ ಕೂಡ ಇದೆ ಆಗಿದೆ ಎಂದು ನಾನು ಭಾವಿಸುತ್ತೇನೆ. ಸದನ ಸಮಿತಿ ಮಾಡಬೇಕೆಂದು ಜಾತ್ಯಾತೀತ ದಳ ಪಕ್ಷದ ಸದಸ್ಯರು ಒತ್ತಾಯ ಮಾಡಿದಾಗ, ಸರ್ಕಾರ ಒಪ್ಪುತ್ತಿಲ್ಲ. ನಾನು ತಮಗೆ ಒಂದು ಸಲಹೆ ಕೊಡುವುದೇನೆಂದರೆ, ಅವರ ಅಭಿಪ್ರಾಯಕ್ಕೆ ಸದನದ ಅಭಿಪ್ರಾಯಕ್ಕೆ ತೆಗೆದುಕೊಳ್ಳಬೇಡಿ. ಸದನದ ಎಲ್ಲಾ ಮಾನ್ಯ ಸದಸ್ಯರೆಲ್ಲರ ಅಭಿಪ್ರಾಯವನ್ನು ಪಡೆದುಕೊಂಡು ಪ್ರಜಾಪ್ರಭುತ್ವದಲ್ಲಿ ಏನಿದೆ ಎಂದರೆ,

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

majority carries the point. Majority of opinion ಸದನ ಸಮಿತಿ ಮಾಡಬೇಕೆಂದು ಬಂದರೆ, ಸದನ ಸಮಿತಿಯನ್ನು ಮಾಡಿ. Majority ಇರಲಿಲ್ಲವೆಂದರೆ ಬಿಟ್ಟುಬಿಡಿ. ಇದು ನನ್ನ ಸಲಹೆಯಾಗಿದೆ. ತಾವು ಅದನ್ನು ಒಪ್ಪುತ್ತೀರೆಂದು ನನ್ನ ಭಾವನೆಯಾಗಿದೆ.

**ಸಭಾಪತಿಯವರು:–** ಮಾನ್ಯ ಸಚಿವರೇ ಮಾತನಾಡಿ.

(ಮುಂದು)

**(522)19.03.2021, 12.00, ಟಿಸಿಹೆಚ್–ಎಕೆ**

**(ಈ ಹಂತದಲ್ಲಿ ಜೆ.ಡಿ(ಎಸ್) ಪಕ್ಷದ ಎಲ್ಲಾ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತು ಧರಣಿ ನಡೆಸುತ್ತಿದ್ದರು)**

**ಡಾ॥ ಕೆ. ಸುಧಾಕರ್:–** ಮಾನ್ಯ ಸಭಾಪತಿಯವರೇ, ನಮಗೆ ಯಾವುದೇ ಒಣ ಪ್ರತಿಷ್ಠೆಯೂ ಇಲ್ಲ ಮತ್ತು ಯಾರನ್ನು ರಕ್ಷಣೆ ಮಾಡುವಂತಹ ಉದ್ದೇಶವೂ ಇಲ್ಲ. ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಂಡು ಈ ವ್ಯವಸ್ಥೆಯನ್ನು ಸರಿದಾರಿಗೆ ತರಬೇಕೆಂದು ಪ್ರಯತ್ನ ಮಾಡತಕ್ಕಂಥ ಒಂದು ಕಾರಣದಿಂದ ನಿನ್ನೆ ದಿವಸ ನಡೆದಂಥ ಚರ್ಚೆಯಲ್ಲಿ ಮಾನ್ಯ ಸಭಾಪತಿಯವರಾದ ತಾವು ನಿರ್ದೇಶನವನ್ನು ಕೊಟ್ಟಿದ್ದೀರಿ. ನಿಯಮ 72ರಲ್ಲಿ ನಿಲುವಳಿ ಸೂಚನೆಯನ್ನು ತಂದಿರುವುದು ನಮ್ಮ ಪಕ್ಷದ ಸದಸ್ಯರಾಗಿದ್ದರೂ ಕೂಡ ಆ ನಿಯಮದ ಪ್ರಕಾರ ಇನ್ನೊಬ್ಬರಿಗೆ ಮಾತನಾಡುವುದಕ್ಕೆ ಅವಕಾಶವಿರಲಿಲ್ಲ. ಆದರೂ ಕೂಡ ಇದು ಈ ರಾಜ್ಯದ ಬಹಳ ಮುಖ್ಯವಾಗಿರತಕ್ಕಂಥ ವಿಷಯವೆಂದು...

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಇದನ್ನು ವಿರೋಧಿಸುತ್ತೇನೆ. ಇಬ್ಬರು ಸಚಿವರಾಗಿ . . .

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಸಭಾಪತಿಯವರು:–** ಜೆ.ಡಿ.(ಎಸ್) ಪಕ್ಷದ ಸದಸ್ಯರೆಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು. **ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಿದ್ದು ಯಾವುದೂ ಕಡತಕ್ಕೆ ಹೋಗಬಾರದು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ, ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಕೆ.ಟಿ.ಶ್ರೀಕಂಠೇಗೌಡರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಿದ್ದನ್ನು, ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. (ಗೊಂದಲ) ತಾವು ಏನು ಮಾತನಾಡುತ್ತಿದ್ದೀರಿ? ನಿಮಗೆ ಏನಾದರೂ ಇದೆಯೇ? ನೀವು ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

**ಡಾ॥ ಕೆ.ಸುಧಾಕರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಅವರು ಸದನದ ಗೌರವವನ್ನು ಹಾಳುಮಾಡುತ್ತಿದ್ದಾರೆ. ಇಂಥವರು ಸದನದಲ್ಲಿ ಇರುವುದಕ್ಕೆ ಲಾಯಕ್ ಇಲ್ಲ.

**(ಗೊಂದಲ)**

**ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಯವರೇ ಈ ರೀತಿ...

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರವರೇ, ತಾವು temper ಕಳೆದುಕೊಳ್ಳಬೇಡಿ, ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಬೇಕು.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ,...

**(ಗೊಂದಲ)**

**ಸಭಾಪತಿಯವರು:-** ಹೌಸ್‌ನಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದ್ದನ್ನು ಯಾವುದನ್ನೂ ರೆಕಾರ್ಡ್ ಮಾಡಿಕೊಳ್ಳಬೇಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದಂತೆ, ಆಡಳಿತ ಪಕ್ಷದ ಸದಸ್ಯರುಗಳಾದ ಡಾ॥ತೇಜಸ್ವಿನಿಗೌಡ, ಇತರೆ ಸದಸ್ಯರುಗಳು ಹಾಗೂ ಸದನದ ಬಾವಿಯಲ್ಲಿ ನಿಂತುಕೊಂಡಿದ್ದ ಜೆ.ಡಿ.ಎಸ್ ಪಕ್ಷದ ಸದಸ್ಯರುಗಳು ಮಾತನಾಡಿದ್ದನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಡಾ॥ ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಅವರು ಈ ಸದನದ decorum ಅನ್ನು ಹಾಳು ಮಾಡುತ್ತಿದ್ದಾರೆ.

**ಶ್ರೀ ಸುನೀಲ್ ವಲ್ಯಾಪುರ್:-** ಸದನ ಸಂತೆ ಆಗಿಬಿಟ್ಟಿದೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಿಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ತಾವು ರೂಲಿಂಗ್ ಕೊಡಿ.

**ಸಭಾಪತಿಯವರು:-** ಈಗ ನಾನು ಎರಡೂ ಕಡೆ ಅಭಿಪ್ರಾಯವನ್ನೂ ಕೇಳಿದ್ದೇನೆ. ಅದಕ್ಕಾಗಿ ಸಾಕಷ್ಟು ಸಮಯವನ್ನು ಕೊಟ್ಟಿದ್ದೇನೆ. ಈಗ ನಾನು ಪ್ರಶ್ನೋತ್ತರ ಅವಧಿಯನ್ನು ಪ್ರಾರಂಭ ಮಾಡುತ್ತೇನೆ. ಆದ್ದರಿಂದ ದಯಮಾಡಿ ಈ ಸದನವನ್ನು ನಡೆಸಲು ಅನುವು ಮಾಡಿಕೊಡಬೇಕು.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕೆ ನಾನು ಹೇಳಿದ್ದು, ಇದು ಇತ್ಯರ್ಥವಾಗುವುದಕ್ಕೆ ಒಂದು ರೂಲಿಂಗ್ ಕೊಡಿ.

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುವುದೇನೆಂದರೆ, ಅಂತಹ ಪರಿಸ್ಥಿತಿ ಇಲ್ಲಿ ಇಲ್ಲ. ನಾನು ಹೇಳುವುದಕ್ಕಾಗುವುದಿಲ್ಲ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, the majority carries the point. ಸದನದಲ್ಲಿ ಮಾನ್ಯ ಸದಸ್ಯರುಗಳ ಅಭಿಪ್ರಾಯವನ್ನು ಪಡೆಯಿರಿ. ಸದನ ಸಮಿತಿ ರಚನೆ ಮಾಡಬೇಕೆಂದು ಮಾನ್ಯ ಸದಸ್ಯರುಗಳ ಮೆಜಾರಿಟಿ ಇದ್ದರೆ ಮಾಡಿ, ಇಲ್ಲವೆಂದರೆ ಬಿಡಿ.

**(ಗೊಂದಲ)**

**ಸಭಾಪತಿಯವರು:-** ಅದನ್ನು ಮಾಡುವಂಥದ್ದು ನಮ್ಮ ಕಡೆ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸದನದ ಒಪ್ಪಿಗೆ ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, you take the opinion of the House. ನೋಡಿ, ಇಂತಹ ಸಂದರ್ಭದಲ್ಲಿ ಸದನದ ಅಭಿಪ್ರಾಯವನ್ನು ಪಡೆಯಬೇಕೆಂದು . . .

**ಸಭಾಪತಿಯವರು:-** ಈಗ ಅದನ್ನು ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸದನ ಸಮಿತಿ ರಚನೆ ಮಾಡುವುದಕ್ಕೆ ಸರ್ಕಾರದ ಸಹಮತ ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಂತಹ ಸಂದರ್ಭದಲ್ಲಿ ಸದನದ ಅಭಿಪ್ರಾಯವನ್ನು ತೆಗೆದುಕೊಳ್ಳಿ. ಸದನದ ಅತಿಹೆಚ್ಚು ಸದಸ್ಯರುಗಳು ಯಾರ ಪರ ನಿರ್ಣಯ ಕೈಗೊಳ್ಳುತ್ತಾರೆ. ಅದರಂತೆ ತಾವು ನಿರ್ಣಯ ಕೈಗೊಳ್ಳಿ. ಸದನ ಸಮಿತಿ ಮಾಡುವುದಕ್ಕೆ ಮೆಜಾರಿಟಿ ಮೆಂಬರ್ಸ್ ಒಪ್ಪಿದರೆ ಸದನ ಸಮಿತಿ ರಚನೆ ಮಾಡಿ. Majority members ಒಪ್ಪದಿದ್ದರೆ ಬಿಡಿ. (ಗೊಂದಲ) ಸರ್ಕಾರದ ಪರ. You put if for voting. Division ಗೆ ಹಾಕಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರವರು ಸದನದ ಬಾವಿಯಲ್ಲಿ ನಿಂತುಕೊಂಡು ಮಾತನಾಡಿದ್ದನ್ನು ದಾಖಲಿಸಿರುವುದಿಲ್ಲ)**

**ಡಾ॥ತೇಜಸ್ವಿನಿಗೌಡ:-** ಸತ್ಯಹರಿಶ್ಚಂದ್ರ ಆಗಿರುವುದಕ್ಕೆ ಆ ಧೈರ್ಯ ತೋರಿಸಿರುವುದು. ಯಾವುದೇ ತನಿಖೆ ಅವಶ್ಯಕತೆಯಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳ ಅಭಿಪ್ರಾಯ ಪಡೆದು ಮೆಜಾರಿಟಿ ತೆಗೆದುಕೊಂಡು ನೀವು ಸದನ ಸಮಿತಿ ನೇಮಿಸಿ.

**(ಗೊಂದಲ)**

**ಸಭಾಪತಿಯವರು:-** ಅದನ್ನು ಮಾಡುವುದಕ್ಕೆ ಆಗುವುದಿಲ್ಲ. (ಗೊಂದಲ) ಆಯಿತು ನೀವು ಹೇಳಿದ್ದೀರಲ್ಲಾ, (ಗೊಂದಲ) ನೋಡಿ, . .

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಾವು ಡಿವಿಜನ್ ಕೇಳುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಕೇಳಿ, ಡಿವಿಜನ್ ಕೇಳಬೇಕಾದರೆ,. .

**(ಗೊಂದಲ)**

**ಸಭಾಪತಿಯವರು:-** ನೀವು ಸುಮ್ಮನಿರ್ರೀ, ನಿಮಗೆ ಏನಾದರೂ ಮಾನಮರ್ಯಾದೆ ಇದೆಯೇ? ಸುಮ್ಮನೆ ಕುಳಿತುಕೊಳ್ಳಿ ಸಾಕು. ಎಷ್ಟು ಮಾತನಾಡುತ್ತೀರಿ? (ಗೊಂದಲ) ನಾನು ಹೇಳುವುದನ್ನು ಒಂದು ನಿಮಿಷ ಕೇಳಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, you can put it for voting. ನಾವು division ಗೆ press ಮಾಡುತ್ತೇವೆ.

**(ಗೊಂದಲ)**

**ಸಭಾಪತಿಯವರು:-** ಇವತ್ತಿನ ಎಲ್ಲಾ ಕಾರ್ಯಕಲಾಪಗಳ. . .

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ decency ಇಲ್ಲ. ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಸಭಾಪತಿಯವರು:-** ಯಾರಾದರು ಒಬ್ಬರು ಸದಸ್ಯರು ಮಾತನಾಡಿ. ಎಲ್ಲರೂ ಒಟ್ಟಿಗೆ ಮಾತನಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಸದನ ಸಮಿತಿಯನ್ನು ನೇಮಿಸುವುದಕ್ಕೆ majority opinion ತೆಗೆದುಕೊಳ್ಳಿ. ಒಂದು ವೇಳೆ, majority opinion ಇಲ್ಲವೆಂದರೆ ಬಿಡಿ. ಸರ್ಕಾರದ ಪರ ಆಗಲಿ.

**(ಗೊಂದಲ)**

**(ಈ ಹಂತದಲ್ಲಿ ಜೆಡಿ(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು)**

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಹೇಳಿದ್ದೀರಿ. You have to take the opinion of the House.

**(ಗೊಂದಲ)**

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ. ನಾನು ಮಾತನಾಡುವುದನ್ನು ಕೇಳಿ. ಈ ಸದನದ ಅಭಿಪ್ರಾಯವನ್ನು ಕೇಳುವುದು ಯಾವಾಗ ಎಂದರೆ, ಯಾವುದಾದರು ಒಂದು ಬಿಲ್ ಮತ್ತೊಂದು ಪ್ರಸ್ತಾವನೆ ನಮ್ಮ ಮುಂದೆ ಇಲ್ಲ. ಅಂತಹ ಪ್ರಸ್ತಾವನೆಗಳು ಬಂದಾಗ ಅಭಿಪ್ರಾಯ ಕೇಳುವಂಥ ಪ್ರಶ್ನೆ ಬರುತ್ತದೆ. ಅಂತಹ ಯಾವುದೇ ಪ್ರಸ್ತಾವನೆಗಳು ಇಲ್ಲದಿದ್ದಾಗ, ಯಾರಾದರೂ ಹೇಳಿದರೆ ಅದು ಪ್ರಸ್ತಾವನೆಯಾಗುವುದಿಲ್ಲ. (ಗೊಂದಲ) ಸದಸ್ಯರುಗಳ ಅಭಿಪ್ರಾಯ ಕೇಳುವುದಕ್ಕೆ ಪ್ರಸ್ತಾವನೆ ಬೇಕು.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಸದನ deadlock ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸರ್ಕಾರ ಸದನ ಸಮಿತಿ ರಚನೆ ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈ ಸದನದ ಒಪ್ಪಿಗೆ ತೆಗೆದುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಅದಕ್ಕೆ ಪ್ರಸ್ತಾವನೆ ಬೇಕು. ನೀವು ನಿಯಮಾವಳಿಗಳನ್ನು ತೆಗೆದು ನೋಡಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಇಂತಹ ಸಂದರ್ಭದಲ್ಲಿ you collect the opinion of this August House.

**(ಗೊಂದಲ)**

**ಸಭಾಪತಿಯವರು:-** ಈ ಹಿನ್ನೆಲೆಯಲ್ಲಿ, ಸದನವನ್ನು ನಡೆಸುವುದು ಬಹಳ ಕಷ್ಟವಾದುದರಿಂದ, ದಿನಾಂಕ 22.03.2021 ರಂದು ಸೋಮವಾರ ಬೆಳಗ್ಗೆ 10 ಗಂಟೆ 30 ನಿಮಿಷಗಳವರೆಗೆ ಸದನವನ್ನು ಮುಂದೂಡಿದ್ದೇನೆ.

**(ಸದನವು ಮಧ್ಯಾಹ್ನ 12 ಗಂಟೆ 5 ನಿಮಿಷಗಳಿಗೆ ಮುಂದೂಡಲ್ಪಟ್ಟು, ಪುನಃ ದಿನಾಂಕ 22ನೇ ಮಾರ್ಚ್ ಮಾಹೆ 2021ರ ಸೋಮವಾರ ಬೆಳಗ್ಗೆ 10.30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"